ವಾರದ ಮುಂಗಾರು

ಭಾನುವಾರ 19 - 2 - 1989

ಚಿತ್ರ:

ಕುಸಿಯುತ್ತಿರುವ ಕಟ್ಟಡಗಳು; ನಿರಂತರ ವಲಸೆ ಬರುವ ಲಕ್ಷಗಟ್ಟಳೆ ಜನರು; ಸೋಲುತ್ತಿರುವ ಕಾನೂನು; ಮರೀಚಿಕೆಯಾಗುತ್ತಿರುವ ನಾಗರಿಕ ಸೌಲಭ್ಯಗಳು; ಬೆಳೆಯುತ್ತಿರುವ ಕೊಳೆಗೇರಿಗಳು; ರಸ್ತೆಯಲ್ಲೇ ಉಕ್ಕಿ ಚೆಲ್ಲಾಡುವ ಕೊಳಕು; ಹೊಗೆ, ಧೂಳು, ಕಸ, ನಡು ಬೀದಿಯಲ್ಲಿ ನಿಂತು ಬಿಡುವ ವಾಹನಗಳ ಟ್ರಾಫಿಕ್ ಜಾಮ್ - ಇದು ಪತನಗೊಳ್ಳುತ್ತಿರುವ ಭಾರತದ ಮಹಾ ನಗರಗಳ ಬಿಗಡಾಯಿಸುತ್ತಿರುವ ಸ್ಥಿತಿ. ಮುಂಬಯಿ, ದಿಲ್ಲಿ, ಕಲ್ಕತ್ತಾ, ಮದರಾಸ್, ಬೆಂಗಳೂರುಗಳಲ್ಲಿ ದಿನೇ ದಿನೇ ಉಕ್ಕುತ್ತಿರುವ ಜನಸಾಗರ, ಮಹಾನಗರಗಳ ಬದುಕನ್ನು ಅಸಹನೀಯಗೊಳಿಸುತ್ತಿದೆ. ಎಲ್ಲಿದೆ ಇದಕ್ಕೆ ಪರಿಹಾರ?

ಪ್ರಧಾನಿಯಾದ ಹೊಸತರಲ್ಲಿ ರಾಜೀವ ಗಾಂಧಿ ಅವರು ಕಲ್ಕತ್ತಕ್ಕೆ ಭೇಟಿ ನೀಡಿ ''Calcutta is a dying city', ಎಂದರು. ಕಲ್ಕತ್ತದಲ್ಲಿ ಗಲಭೆಯಾಯಿತು. ಟೀಕೆಗಳು ಹಾರಿದವು. ಕೊನೆಗೆ ಪ್ರಧಾನಿ ತಮ್ಮ ಹೇಳಿಕೆಗೆ ಸ್ಪಷ್ಟೀಕರಣ ನೀಡಬೇಕಾಯಿತು. ಅಲ್ಲಿಗೆ ಆ ವಿವಾದ ಮುಗಿಯಿತು. ಆದರೆ ಪ್ರಧಾನಿ ಗಮನ ಸೆಳೆದ ಸಮಸ್ಯೆ ಹಾಗೆಯೇ ಉಳಿದು ಹೋಯಿತು.

ಹೌದು. ಭಾರತದ ಮಹಾ ನಗರಗಳಲ್ಲೊಂದಾದ ಕಲ್ಕತ್ತ ಸಾಯುತ್ತಿದೆ. ಆದರೆ ದಿಲ್ಲಿ, ಮದರಾಸು, ಮುಂಬಯಿಯಂತಹ ಇತರ ನಗರಗಳೂ ಸಾವಿನ ಅಂಚಿನಲ್ಲಿವೆ. ಆ ನಗರಗಳು ತಮ್ಮ ಉಸಿರಾಟವನ್ನು ನಿಲ್ಲಿಸಿಕೊಳ್ಳತೊಡಗಿವೆ. ಜನರ ವಲಸೆ, ಅಡ್ಡಾದಿಡ್ಡಿಯಾಗಿ ಬೆಳೆಯುತ್ತಿರುವುದು. ಮೂಲ ಭೂತ ಸೌಕರ್ಯಗಳ ಸುಧಾರಣೆಯಾಗದೆ ಹಳೆಯ ವ್ಯವಸ್ಥೆಗಳು ತಮ್ಮ ಭಾರಕ್ಕೆ ತಾವೇ ಕುಸಿಯುತ್ತಿರುವುದು ಆ ನಗರಗಳ ನಿಧಾನ ಸಾವಿಗೆ ಕಾರಣಗಳು.

"ಏರುತ್ತಿರುವ ಜನಸಂಖ್ಯೆಯೇ ಪ್ರಗತಿಗೆ ಅಡ್ಡಿ" ಎಂದು ಕೇಂದ್ರ ಹೇಳಿದರೆ "ವಲಸೆ ಬರುವ ಜನರೇ ಜನಸಂಖ್ಯಾ ಸ್ಫೋಟಕ್ಕೆ ಮುಖ್ಯ ಕಾರಣ" ಎಂದು ಮಹಾರಾಷ್ಟ್ರ ಸರಕಾರ ಹೇಳುತ್ತಿದೆ. ವಲಸೆಯ ಮೇಲೆ ನಿರ್ಬಂಧ ಹೇರಬೇಕು ಎಂದು ಅದು ಸಲಹೆಯನ್ನೂ ಕೊಟ್ಟಿತ್ತು. ಆ ಸಲಹೆಯ ಬಗೆಗೂ ಗಲಭೆಯಾಯಿತು. ಮಹಾರಾಷ್ಟ್ರ ಸರಕಾರ ಬಾಯಿ ಮುಚ್ಚಿತು. ಆದರೆ ಮೂಲ ಸಮಸ್ಯೆ ಮಾತ್ರ ಹಾಗೆಯೇ ಉಳಿಯಿತು.

ನಿರುದ್ಯೋಗ, ಉಪವಾಸ-ವನವಾಸಗಳ ಬವಣೆ, ಮನೋರಂಜನಾ ತಾಣಗಳ ಆಕರ್ಷಣೆ ಮುಂತಾದವುಗಳು ಜನರು ಮಹಾನಗರಗಳಿಗೆ ವಲಸೆ ಹೋಗಲು ಪ್ರಮುಖ ಕಾರಣ.

ವಿಶ್ವಪ್ರೇಮಿ

ಮಹಾನಗರಗಳಲ್ಲಿ ಒಂದಲ್ಲ ಒಂದು ಉದ್ಯೋಗ ದೊರೆತೇ ದೊರೆಯುತ್ತದೆ. ಉದ್ಯೋಗಕ್ಕಲ್ಲದಿದ್ದರೂ ಉಂಡಾಡು ಮಕ್ಕಳ ಹಣಕ್ಕೆ ಮೋಸವಿಲ್ಲ. ಊರಿನಲ್ಲಿ ಸಣ್ಣ ಪುಟ್ಟ ಕೆಲಸಗಳನ್ನು ಮಾಡಲು ಹೇಸುವ ಜನರೂ ಮಹಾನಗರಗಳಲ್ಲಿ ಯಾವ ಕೆಲಸಕ್ಕಾದರೂ ಸಿದ್ಧ. ಊರು ಅಪರಿಚಿತವಾಗಿರುವುದೇ ಇದಕ್ಕೆ ಕಾರಣ.

ಮುಂಬಯಿ ಮಹಾ ನಗರವನ್ನೇ ತೆಗೆದುಕೊಳ್ಳಿ. ಸಾಮಾನ್ಯ ಶಿಕ್ಷಿತನೊಬ್ಬ ಅಲ್ಲಿ ಹೋಗಿ ಮಟ್ಕಾ ಅಂಗಡಿಗಳಲ್ಲಿ ಚೀಟಿ ಬರೆದೇ ಜೀವನ ಸಾಗಿಸಬಹುದು. ಸಾಮರ್ಥ್ಯವಿದ್ದವರು ಅವಕಾಶವಿದ್ದಷ್ಟು ಏರಬಹುದು – ಎರಡು – ಮೂರು ವಿವಿಧ ಸಣ್ಣ ಪುಟ್ಟ ಉದ್ಯೋಗಗಳನ್ನು ಮಾಡಿ ಹೊಟ್ಟೆ ಹೊರೆಯಬಹುದು. ಆದ್ದರಿಂದಲೇ ಮುಂಬಯಿಯನ್ನು 'ಮುಂಬಾ ತಾಯಿ' ಎಂದೇ ಭಾವಪೂರ್ಣವಾಗಿ ಕರೆಯಲಾಗುತ್ತಿದೆ. ಅನ್ನ, ಬಟ್ಟೆ, ಸೂರು ಅಕ್ಷಯ ದೇವಿ ತನ್ನ ಮಡಿಲು ಸೇರಿದ ಯಾರನ್ನೂ ಈವರೆಗೆ ನಿರಾಶೆಗೊಳಿಸಿಲ್ಲ. ಮುಂಬಯಿಂದ ಸೋತು, ಕಂಗಾಲಾಗಿ ಊರಿಗೆ ಮರಳಿದವರೂ ತೀರಾ ಕಡಿಮೆ. ಹೋಟೇಲ್ ಮಾಣಿಗಳಾಗಿ ಹೋದವರನ್ನು ಹೋಟೇಲ್ ಮಾಲೀಕರನ್ನಾಗಿ ಮಾಡಿದ್ದು ಮುಂಬಯಿ. ಅಕ್ಷರದ ಗಂಧ, ಗಾಳಿ ಇಲ್ಲದವರನ್ನು ವಿದ್ಯಾವಂತರನ್ನಾಗಿ ಮಾಡಿದವಳು ಮುಂಬಯಿ ತಾಯಿ. ದೇಶದ ವಿವಿಧ ಭಾಗಗಳಿಂದ ಅಲ್ಲಿಗೆ ಬಂದವರನ್ನು ಬೆಳೆಸಿ, ಪೋಷಿಸಿ, ರಕ್ಷಿಸಿದವಳು ಈ ಮುಂಬಾ ತಾಯಿ. ಇಂತಹ ಮುಂಬಯಿಗೂ ಅಪರಿಹಾರ್ಯವಾದ ಸಮಸ್ಯೆಗಳಿವೆ. ನೆಲವೆಲ್ಲವೂ ಕೊಚ್ಚೆಮಯವಾಗಿ, ಪ್ರವಾಹದೋಪಾದಿಯಲ್ಲಿ ಬರುವ ಜನರ ಪಾದಗಳಡಿಯಲ್ಲಿ ಸಿಲುಕಿ, ನಲುಗಿ ಈ ಮಹಾತಾಯಿ ಉಬ್ಬಸ ಪಡುತ್ತಿದ್ದಾಳೆ,

ವಿದ್ಯಾರ್ಥಿಗಳು ಬರುತ್ತಿದ್ದಾರೆ. ಬರಿಸಿ ಕೊಳ್ಳ ಲಾರದ ನಗರಪಾಲಿಕೆ ಅಸಹಾಯಕವಾಗಿದ್ದಾರೆ.

ಕುಸಿವ ಕಟ್ಟಡಗಳ ನಗರ-ಮುಂಬಯಿ

ಮುಂಬಯಿಯಲ್ಲಿ ಸಮಸ್ಯೆ ಇಲ್ಲಿ ಆರಂಭವಾಗುತ್ತದೆ ಎಂದೇ ಹೇಳುವಂತಿಲ್ಲ. ಒಂದೆಡೆಯಲ್ಲಿ ಬಹು ಮಹಡಿ ಕಟ್ಟಡಗಳು ಮೇಲೇರುತ್ತಲೇ ಇರುತ್ತವೆ, ಇನ್ನೊಂದೆಡೆಯಲ್ಲಿ ಹಳೆಯ ಬಹು ಮಹಡಿ ಕಟ್ಟಡಗಳು ಕುಸಿಯುತ್ತಲೇ ಇರುತ್ತವೆ. ಅದರಡಿಯಲ್ಲಿ ಬಿದ್ದು ಸಾಯುವುದು, ಜಖಂಗೊಳ್ಳುವುದು, ಬಚಾವಾಗುವುದು ಎಲ್ಲ ಮಾಮೂಲಿನ ಸುದ್ದಿಗಳಷ್ಟೆ ಆಗಿ ಬಿಡುತ್ತವೆ. ಮುಂಬಯಿಯ ಒಂದಲ್ಲ ಒಂದು ಭಾಗದಿಂದ ಒಂದಲ್ಲ ಒಂದು ಕಟ್ಟಡ ಕುಸಿದ ಸುದ್ದಿ ದಿನನಿತ್ಯ ಕಿವಿಗೆ ಅಪ್ಪಳಿಸುತ್ತಲೇ ಇರುತ್ತದೆ. ಸತ್ತವರಿಗಾಗಿ ಅಳಲು, ಗಾಯಗೊಂಡವರನ್ನು ಸಂತೈಸಲು, ಬದುಕುಳಿದವರನ್ನು ಸ್ವಾಗತಿಸಲು ದಿನದ ಒಂದಷ್ಟು ಹೊತ್ತನ್ನು ಮೀಸಲಿಡುವುದು ಅನಿವಾರ್ಯ ಅಂಗವಾಗಿದೆ.

ಟ್ರಾಫಿಕ್ ಜಾಮ್...

1986-87ರಲ್ಲಿ ಮುಂಬಯಿಯಲ್ಲಿ ಹಲವು ಕಟ್ಟಡಗಳು ಕುಸಿದಿವೆ. ಹಲವು ನೂರು ಮಂದಿ ಸತ್ತಿದ್ದಾರೆ. ನೂರಾರು ಮಂದಿ ಗಾಯಗೊಂಡಿದ್ದಾರೆ. 16,502 ಕಟ್ಟಡಗಳು ಶಿಥಿಲಾವಸ್ಥೆಯಲ್ಲಿದ್ದು ಈಗಲೋ, ಆಗಲೋ ಕುಸಿಯುವಂತಿವೆ. ಅದಲ್ಲದೆ ಅಕಾಲಿಕವಾಗಿ ಸುರಿಯುವ ಮಳೆ, ಕಾರ್ಖಾನೆಗಳಲ್ಲಿ ಸಂಭವಿಸುವ ಅವಘಡ ಮತ್ತು ಬೆಂಕಿ ದುರಂತಗಳು ರಸ್ತೆ ಅಪಘಾತಗಳು, ಸಾಂಕ್ರಾಮಿಕ ಕಾಯಿಲೆಗಳು ಇತ್ಯಾದಿಗಳಿಂದ ಸಾಯುವವರ ಸಂಖ್ಯೆ ದಿನವೊಂದಕ್ಕೆ ಸಾವಿರಕ್ಕೂ ಹೆಚ್ಚು. ವಿಶ್ವಾದ ದ್ವಿತೀಯ ಅತಿ ದೊಡ್ಡ ವೇಶ್ಯಾ ಕೇಂದ್ರವೆನಿಸಿರುವ ಮುಂಬಯಿಯ ಕಾಮಾಟಿಪುರದಲ್ಲಿ ಮಾರಕ 'ಏಡ್ಸ್' ರೋಗಿಗಳೂ ಇದ್ದಾರೆ ಎನ್ನಲಾಗಿದೆ. ಅವರಿಂದ ಎಷ್ಟು ಮಂದಿಗೆ ಈ ರೋಗ ಹಬ್ಬಿದೆ ಎಂಬುದು ಇನ್ನೂ ತಿಳಿದು ಬಂದಿಲ್ಲ. ಮುಂಬಯಿಯಂತಹ ಒಂದು ನಗರದಲ್ಲಿ ಸಾಂಕ್ರಾಮಿಕ ರೋಗವೊಂದು ಸ್ಫೋಟಗೊಂಡಲ್ಲಿ ಅದರ ಪರಿಣಾಮ ಏನು ಎಂದು ಊಹಿಸಿಕೊಳ್ಳಿ.

ದೇಶದ ನಾಲ್ಕು ಮಹಾ ನಗರಗಳ ಬಗ್ಗೆ ದೇಶದ ಎಲ್ಲಾ ಜನರಿಗೂ ತುಂಬು ಭರವಸೆ. ಉದ್ಯೋಗ, ಆಸರೆ, ಬಟ್ಟೆ ಮತ್ತು ಮನೋರಂಜನೆಗೆ ಯಾವ ಕೊರತೆಯೂ ಇಲ್ಲವೆಂಬುದೇ ಇದಕ್ಕೆ ಕಾರಣ. ಕೈ ಸುಟ್ಟರೂ ಹೊಟ್ಟೆ ತುಂಬಿಸದ ಕೃಷಿ, ಶಿಕ್ಷಣ ಪಡೆದರೂ ದೊರೆಯದ ಉದ್ಯೋಗ ದೇಸರ ಕಳೆಯುವ ಮಾರ್ಗಗಳ ಅಭಾವಗಳಿಂದ ಜನರು ಈ ಮಹಾನಗರಗಳತ್ತ ಎಡೆ ಬಿಡದೆ ವಲಸೆ ಹೋಗುತ್ತಿದ್ದಾರೆ. ಮಳೆಯ ಅಭಾವದಿಂದ ಹಾಳು ಬೀಳುತ್ತಿರುವ ಜಮೀನು, ಅರಣ್ಯ ಮತ್ತು ಪರಿಸರ ನಾಶದಿಂದ ಅಲಭ್ಯವಾಗಿರುವ ಸೌದೆ, ಬೋಳು ಅರಣ್ಯಗಳಿಂದಾಗಿ ಮರೀಚಿಕೆಯಾಗಿರುವ ನೀರು, ಗಳಿಸುವ ಕೈಗಳು ಕಡಿಮೆಯಾಗಿ, ತಿನ್ನುವ ಬಾಯಿಗಳು ಹೆಚ್ಚಾಗಿರುವುದು ಮತ್ತು ಹಣದ ಬಗೆಗಿನ ಅತ್ಯಾಸೆ ಮತ್ತು ನಗರಗಳಲ್ಲಿ ಅದನ್ನು ಗಳಿಸಲು ಸುಲಭವೆಂಬ ನಂಬಿಕೆಗಳು ಜನರ ವಲಸೆಯ ಇತರ ಕಾರಣ



ಕಸದ ರಾಶಿ

ತಣ್ಣೀರ್... ತಣ್ಣೀರ್...

ನಗರದ ವ್ಯಾಮೋಹಕ್ಕೆ ಬಲಿ ಬಿದ್ದ ಸುಮಾರು 50ಲಕ್ಷ ಮಂದಿ ಪ್ರತಿವರ್ಷ ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಈ ಅವ್ಯಾಹತ ವಲಸೆಯಿಂದಾಗಿ ಕಳೆದ 35 ವರ್ಷಗಳ ಅವಧಿಯಲ್ಲಿ ವಿವಿಧ ಮಹಾ ನಗರಗಳ ಜನಸಂಖ್ಯೆ ನಾಲ್ಕು ಪಟ್ಟನಷ್ಟು ಹೆಚ್ಚಿದೆ. 1951ರಲ್ಲಿ 5.60 ಕೋಟಿ ಮಂದಿ ನಗರಗಳಲ್ಲಿ ವಾಸವಾಗಿದ್ದರೆ 1987ರ ಹೊತ್ತಿಗೆ ಅದು 23 ಕೋಟಿಗೆ ಏರಿದೆ. ಅದಲ್ಲದೆ 1991ರ ಹೊತ್ತಿಗೆ ಹತ್ತು ಲಕ್ಷಕ್ಕೂ ಹೆಚ್ಚು ಜನರಿರುವ ಮಹಾನಗರಗಳ ಸಂಖ್ಯೆ 20ಕ್ಕೆ ಏರಲಿದೆ. ಈಗ ಇಂಥ ನಗರಗಳು ಭಾರತದಲ್ಲಿ 12ಮಾತ್ರ ಇವೆ. ಮುಂಬಯಿ ಮತ್ತು ಕಲ್ಕತ್ತಗಳು ಈಗಾಗಲೇ 'ಭಾರೀ ಮಹಾನಗರ'ಗಳಾಗಿವೆ. ಅವುಗಳ ಜನಸಂಖ್ಯೆ ಈಗಲೇ ತಲಾ ಒಂದು ಕೋಟಿಯನ್ನು ದಾಟಿದೆ.

ಭಾರೀ ವಲಸೆಯಿಂದ ಕೊಳೆಗೇರಿಗಳು ಬೆಳೆಯುತ್ತವೆ. ಈಗಾಗಲೇ ಜನಸಂದಣಿ ಮಿತಿ ಮೀರಿರುವ ಈ ನಗರಗಳಲ್ಲಿ ಇರುವ ಜನರಿಗೇ ಸ್ಥಳವಿಲ್ಲ. ಎರಡು ಕೋಣೆಯ, ಮನೆಯೆಂಬ ಹೆಸರಿನ ಗೂಡುಗಳಲ್ಲಿ 10 ರಿಂದ 15 ಮಂದಿ ವಾಸ ಮಾಡಬೇಕಾಗಿರುವುದು ವಾಸ್ತವ ಹೆಚ್ಚು ಜನರಿರುವ ಇಂಥ ಗೂಡುಗಳಲ್ಲಿ ಕೆಲವೊಮ್ಮೆ ರಾತ್ರಿಯ ನಿದ್ರೆಯನ್ನೂ ಸರದಿಯ ಮೇಲೆ ಮಾಡಬೇಕಾಗುತ್ತದೆ ಕೆಲವರು ಕುಳಿತು, ಕೆಲವರು ನಿಂತು, ಕೆಲವರು ಹಗಲಲ್ಲಿ ನಿದ್ರೆ ಮಾಡಬೇಕಾಗುತ್ತದೆ. ಪರಿಸ್ಥಿತಿ ಇಂತಿರುವಾಗ ಹೊಸದಾಗಿ ವಲಸೆ ಬಂದಿರುವವರು ಖಾಲಿ ಸ್ಥಳಗಳಲ್ಲೆಲ್ಲ ಬೀಡು ಬಿಡುತ್ತಾರೆ. ಮಹಾ ನಗರಗಳ ಈ 'ಕಿಷ್ಕಿಂಧೆ' ಮನೆಗಳಲ್ಲಿ ಏಕಾಂತವೆನ್ನುವುದೇ ಸಿಗುವುದಿಲ್ಲ. ಗಂಡ ಹೆಂಡತಿಯರು ತಮ್ಮ ಅತಿ ಏಕಾಂತದ ಕೆಲಸಗಳನ್ನು ಒಂದೊ ಸಾರ್ವಜನಿಕವಾಗಿಯೆ ಪೂರೈಸಬೇಕಾಗುತ್ತದೆ. ಅಥವಾ ಈ ಕೆಲಸಕ್ಕಾಗಿ ಪ್ರೇಮಿಗಳ ಹಾಗೆ ವಸತಿ ಗೃಹಗಳನ್ನು ಆಶ್ರಯಿಸಬೇಕು.

ವಲಸೆ ಬಂದು ಸಿಕ್ಕಸಿಕ್ಕಲೆಲ್ಲ ಬೀಡು ಬಿಟ್ಟವರಿಗೆ ನೆಲವೇ ಹಾಸಿಗೆ, ಆಕಾಶವೇ ಹೊದಿಕೆ. ಎಷ್ಟೋ ಮಂದಿಗೆ ಫುಟ್‌ಪಾತ್‌ಗಳೇ ಮನೆ, ತೆರೆದ ಒಳಚರಂಡಿಗಳೇ ಅವರ ಶೌಚಾಲಯ. ಒಳಚರಂಡಿಗಳಲ್ಲಿ ಮಲ ತೇಲುತ್ತಾ ಬರುವುದು ಸರ್ವಸಾಮಾನ್ಯ ಅಂಶ, ಎಷ್ಟೋ ಮಂದಿಗೆ ಕಾರ್ಖಾನೆಗಳು ಹೊರಗೆ ಬಿಡುವ ಮಲಿನ ನೀರೇ ಜೀವ ಜಲ; ಕುಡಿಯುವ ನೀರು. ಸ್ನಾನ ಮತ್ತು ಬಟ್ಟೆ ಒಗೆಯುವುದು ವೈಭೋಗ. ವರ್ಷದಿಂದ ವರ್ಷಕ್ಕೆ ಹೆಚ್ಚುವ ಕೊಳೆಗೇರಿಗಳು. ಇವುಗಳಲ್ಲಿ ಅಧಿಕೃತ ಮತ್ತು ಅನಧಿಕೃತ ಕೊಳೆಗೇರಿಗಳು ಬೇರೆ.

ಭಾರತದ ಮಹಾನಗರಗಳು ವರ್ಷಕ್ಕೆ ಶೇ. 4ರಿಂದ 7ರ ಪ್ರಮಾಣದಲ್ಲಿ ಬೆಳೆಯುತ್ತವೆ. ಇದು ದೇಶದ ಜನ ಸಂಖ್ಯೆಯ ಬೆಳವಣಿಗೆಯ ಪ್ರಮಾಣಕ್ಕಿಂತ ಎರಡು ಪಟ್ಟು ಹೆಚ್ಚು. ಮುಂಬಯಿಗೆ ದಿನವೊಂದರ ಸುಮಾರು 1,000 ಮಂದಿ ಅಂದರೆ ತಿಂಗಳಿಗೆ ಹೆಚ್ಚು ಕಡಿಮೆ 25ರಿಂದ 30 ಸಾವಿರ ಮಂದಿ ವಲಸೆ ಬರುತ್ತಾರೆ. ವರ್ಷಕ್ಕೆ ಸುಮಾರು ನಾಲ್ಕು ಲಕ್ಷ ಮಂದಿ. ಏನನ್ನೇ ತಿಂದರೂ, ಎಷ್ಟು ತಿಂದರೂ ಕಾಸಿನ ಮಜ್ಜಿಗೆಯೇ ಆಗುವ ಭೀಮನ ಹೊಟ್ಟೆಯೂ ನಗರಗಳು ತಿನ್ನುವ ಈ ಪ್ರಮಾಣದ ಜನಸಂಖ್ಯೆಯ ಮುಂದೆ ಹೊಟ್ಟೆಯೇ ಅಲ್ಲ. ಈಗಲೇ ನಗರಗಳಲ್ಲಿ ತುಂಬಿ ತುಳುಕುತ್ತಿರುವ ಜನರಿಂದಾಗಿ ಸರಕಾರದ ಮೂಲಭೂತ ನಾಗರಿಕ ಸೌಕರ್ಯಗಳು ಯಾವ ಮೂಲೆಗೂ ಸಾಕಾಗುತ್ತಿಲ್ಲ. ಕುಡಿಯುವ ನೀರಿನ ನಳ್ಳಿಗಳ ಮುಂದೆ 'ಕ್ಯೂ'ಗಳು, ಅಲ್ಲಲ್ಲಿ ನೀರಿಗಾಗಿ ಜಗಳಗಳು, ಪಡಿತರ ಅಂಗಡಿಗಳಲ್ಲಿ ಕ್ಯೂ, ಪಡಿತರ ಬೋಗಸ್, ಅಕ್ರಮಗಳು, ಅವ್ಯವಹಾರಗಳು, ರಸ್ತೆಗಳಲ್ಲಿ ಜನ ಮತ್ತು ವಾಹನ ದಟ್ಟಣೆ, ಅದರೆಡೆಯಲ್ಲಿ ಅಲೆಮಾರಿ ದನಗಳು, ಬಿಡಾಡಿ ನಾಯಿಗಳು, ಹಂದಿಗಳು, ಕಸದ ರಾಶಿಗಳು, ಜನರು ರಸ್ತೆ ದಾಟುವರೆಗೆ ವಾಹನಗಳು ದಾಟುವಂತಿಲ್ಲ, ಇದರಿಂದ ಕಣ್ಣಿವೆ ಮುಚ್ಚಿ ತೆರೆಯುವುದರೊಳಗೆ ಕೆಲವು ಮೈಲುಗಳಷ್ಟು ಉದ್ದವಾಗುವ ವಾಹನಗಳ ಕ್ಯೂ. ವಾಹನಗಳು ದಾಟುತ್ತಿರುವಾಗ ಮನುಷ್ಯರು ದಾಟುವಂತಿಲ್ಲ. ಇದು ಸಂಚಾರಿ ನಿಯಮ, ಸಂಚಾರ ನಿಯಂತ್ರಣಕ್ಕೆ ಸಿಗ್ನಲ್ ಲೈಟುಗಳು, ಸಿಗ್ನಲ್ ಕೆಂಪಿನಿಂದ ಹಸಿರಿಗೆ ಬರುವುದರೊಳಗೆ ದಾಟುವ ವೃತ್ತಗಳಲ್ಲಿ ರಾಶಿಗೂಡುವ ಜನ. ಸಾವಿರ, ಸಾವಿರ ತಲೆಗಳು, ಗೊಂದಲ ಗಡಿಬಿಡಿ ಉದ್ವೇಗ ಕಿಸೆಗಳ್ಳರ ಸ್ವರ್ಗ, ರೈಲು ನಿಲ್ದಾಣಗಳು, ವಿಮಾನ ನಿಲ್ದಾಣಗಳು ತಲೆಗಳ ಸಮುದ್ರ. ನಗರಗಳು ಇದೇ ಪ್ರಮಾಣದಲ್ಲಿ ಬೆಳೆಯುತ್ತಾ ಹೋದರೆ ನಗರಗಳಲ್ಲಿ ಕೇವಲ ಜನರು ಮಾತ್ರ ಉಳಿದು ಬೇರೆ ಯಾವ ವ್ಯವಸ್ಥೆಗಳೂ ಉಳಿಯಲಾರವು. ನಗರಗಳು ಸ್ಫೋಟಗೊಳ್ಳಲಿವೆ. ಈ ದೃಶ್ಯವನ್ನು ಕಲ್ಪಿಸಿಕೊಳ್ಳುವುದೂ ಅಸಾಧ್ಯ. ಮುಂಬಯಿ, ಕಲ್ಕತ್ತ, ದಿಲ್ಲಿ ಮತ್ತು ಮದರಾಸು ಮಹಾ ನಗರಗಳಲ್ಲಿ ಆ ನಗರಗಳ ಶೇ. 30ರಷ್ಟು ಮಂದಿ ಕೊಳೆಗೇರಿಗಳಲ್ಲಿ ಬದುಕುತ್ತಿದ್ದಾರೆಂದು ಕೇಂದ್ರ ಸರಕಾರದ ಅಂಕಿ-ಅಂಶ ತಿಳಿಸುತ್ತದೆ.

ಮುಂಬಯಿಯಲ್ಲಿ ಅಲ್ಲಿನ ಜನಸಂಖ್ಯೆಯ ಶೇ. 35 ಮಂದಿ ಕೊಳೆಗೇರಿಗಳಲ್ಲಿ ವಾಸಿಸುತ್ತಿದ್ದಾರೆ. 1981ರಲ್ಲಿ ಮುಂಬಯಿಯ ಜನಸಂಖ್ಯೆ 82 ಲಕ್ಷವಿತ್ತು. 1987ರ ಅಂತ್ಯದ ಹೊತ್ತಿಗೆ ಅದು ಒಂದು ಕೋಟಿಯನ್ನು ದಾಟಿತ್ತು. ಇಡೀ ದೇಶದ ವಿವಿಧ ಭಾಗಗಳ ಕೊಳೆಗೇರಿಗಳಲ್ಲಿ 3 ಕೋಟಿ ಮಂದಿ ಬದುಕುತ್ತಿದ್ದಾರೆಂದೂ ಅಂಕಿ-ಅಂಶಗಳು ತಿಳಿಸುತ್ತವೆ. ಮುಂಬಯಿ ಮಹಾನಗರದ ಶೇ. 22.4ರಷ್ಟು ಮನೆಗಳಿಗೆ ವಿದ್ಯುತ್ ಸೌಕರ್ಯವಿಲ್ಲ. ಜನಸಂಖ್ಯೆಯ ಶೇ. 42 ಮಂದಿಗೆ ಕುಡಿಯುವ ಸ್ವಚ್ಛ, ನಳ್ಳಿ ನೀರು ಇಲ್ಲ. ಶೇ. 27ರಷ್ಟು ಮಂದಿಗೆ ಶೌಚ ಗೃಹಗಳ ಸೌಲಭ್ಯವಿಲ್ಲ. ಬಹುತೇಕ ನಗರಗಳು ಈಗ ತಮ್ಮ ಜನಸಂಖ್ಯೆಯ ಶೇ. 50 ಮಂದಿಗೆ ಮಾತ್ರ ಕುಡಿಯುವ ನೀರನ್ನು ಒದಗಿಸುತ್ತವೆ. ಕೆಲವು ನಗರಗಳಲ್ಲಿ ಎರಡು ದಿನಗಳಿಗೊಮ್ಮೆ ಕೆಲವು ನಗರಗಳಲ್ಲಿ ವಾರಕ್ಕೆರಡು ಬಾರಿ ನಳ್ಳಿ ನೀರು ಒದಗಿಸಲಾಗುತ್ತಿದೆ. ಮುಂಬೈ ನಗರದ ರಸ್ತೆಗಳ ಮೇಲೆ 1981ರಲ್ಲಿ 2.82 ಲಕ್ಷ ವಾಹನಗಳು ಓಡಾಡುತ್ತಿದ್ದರೆ 1986ರಲ್ಲಿ 5.14 ಲಕ್ಷ ವಾಹನಗಳು ಓಡುತ್ತಿವೆ. ಇಷ್ಟು ವಾಹನಗಳಿದ್ದರೂ ಎಷ್ಟೋ ಮಂದಿಗೆ ಸಮಯಕ್ಕೆ ಸರಿಯಾಗಿ ಕಚೇರಿಗೂ, ಕಚೇರಿಯಿಂದ ಮನೆಗೂ ತಲುಪಲಾಗುತ್ತಿಲ್ಲ. ಬಸ್ ಅಥವಾ ರೈಲು ನಿಲ್ದಾಣಗಳಲ್ಲಿ ಮೂರರಿಂದ ನಾಲ್ಕು ಗಂಟೆಗಳಷ್ಟು ಕಾಲ ಕಾಯಬೇಕಾದುದು ಮಾಮೂಲಿನ ಸಂಗತಿಯಾಗುತ್ತಿದೆ. ಪ್ರಯಾಣಿಕರ ಒತ್ತಡದಿಂದಾಗಿ ಮಿತಿ ಮೀರಿದ ಮೂಲೆ ಸೇರಿದ್ದ ವಾಹನಗಳೂ ರಸ್ತೆಗಿಳಿಯುತ್ತವೆ. ಅದಲ್ಲದೆ ಈ ವಾಹನಗಳು ಮತ್ತು ನಗರದ ಕೈಗಾರಿಕೆಗಳು ಚೆಲ್ಲುವ ಹೊಗೆ ವಾತಾವರಣವನ್ನೇ ಮಲಿನಗೊಳಿಸಿ ಜನರ ಬದುಕಿಗೇ ಅಪರಿಹಾರ್ಯ ಅಪಾಯವನ್ನು ತಂದೊಡ್ಡುತ್ತಿದೆ. ವಾಹನಗಳ ಶಬ್ದವೂ ಮಾಲಿನ್ಯ ಉಂಟುಮಾಡುತ್ತಿದೆ. ಅಪಾಯದ ಮಿತಿಯನ್ನು ಮೀರುತ್ತಿದೆ 55 ಡೆಸಿಬಲ್‌ಗಳಷ್ಟು ಶಬ್ದ ಸಹನೀಯ ಎಂದು ಅಂದಾಜು ಮಾಡಲಾಗಿದ್ದರೆ ಮುಂಬಯಿಯಲ್ಲಿ ಈ ಪ್ರಮಾಣ 57 ರಿಂದ 91 ಡೆಸಿಬಲ್‌ಗಳಷ್ಟಿದೆ. ಶಬ್ದ ಮಾಲಿನ್ಯ ಇದೇ ಪ್ರಮಾಣದಲ್ಲಿ ಹೆಚ್ಚುತ್ತಾ ಹೋದರೆ ಸದ್ಯದಲ್ಲೇ ಈ ಮಹಾನಗರಗಳ ಶೇ. 50ಕ್ಕೂ ಹೆಚ್ಚು ಮಂದಿ ಕಿವುಡರಾಗುವುದರಲ್ಲಿ ಸಂದೇಹವಿಲ್ಲ. ಹೊಗೆ ಪೀಡಿತರಾಗಿ ಇನ್ನೊಂದಷ್ಟು ಮಂದಿ ಭೀಕರ ನರ ದೌರ್ಬಲ್ಯ ಮತ್ತು ಇತರ ಕಾಯಿಲೆಗಳಿಂದ ನರಳತೊಡಗಿದರೆ ಆಶ್ಚರ್ಯವೇನೂ ಇಲ್ಲ.

ಇಷ್ಟೆಲ್ಲ ಸಮಸ್ಯೆಗಳು ಸಾಲದೆನ್ನುವಂತೆ ಮುಂಬಯಿ ಮಹಾನಗರ ಮಾದಕ ದ್ರವ್ಯಗಳ ಹಾವಳಿಯಿಂದಲೂ ಕಂಗೆಟ್ಟಿದೆ. ಶಾಲಾ ವಿದ್ಯಾರ್ಥಿಗಳೂ ಸೇರಿದಂತೆ ಹಲವು ಲಕ್ಷ ಮಂದಿ ಮಾದಕ ದ್ರವ್ಯ ಸೇವನೆಗೆ ಬಲಿಯಾಗಿ ನಿರುಪಯೋಗಿ ಪದಾರ್ಥಗಳಂತೆ ಬದುಕಿನ ಕಸದ ಬುಟ್ಟಿಗೆ ಸೇರುತ್ತಿದ್ದಾರೆ. ಬದುಕುವ ಏಕೈಕ ಮಹದಾಸೆ ಅಪರಾಧಗಳ ಸಂಖ್ಯೆಯನ್ನು ಭೀಕರವಾಗಿ ಹೆಚ್ಚಿಸಿದೆ. 1971ರಲ್ಲಿ ಮುಂಬಯಿಯಲ್ಲಿ ವರ್ಷವೊಂದಕ್ಕೆ 25,066 ಭೀಕರ ಕೊಲೆ, ದರೋಡೆ, ಮಾನಭಂಗ ಮತ್ತು ಅತ್ಯಾಚಾರದಂತಹ ಅಪರಾಧಗಳು ಸಂಭವಿಸಿದ್ದರೆ. 1981ರಲ್ಲಿ ಈ ಸಂಖ್ಯೆ 35,263ಕ್ಕೆ ಏರಿತ್ತು. 1987ರಲ್ಲಿ ಇದು 55,000ವನ್ನೂ ದಾಟಿದೆ. ಬಹು ಮಹಡಿಗಳ ಕಟ್ಟಡಗಳನ್ನು ಕಟ್ಟುವುದನ್ನು ತಡೆಯುವುದೇ ಕಟ್ಟಡಗಳ ಕುಸಿತಗಳಿಗೆ ಪರಿಹಾರವೆಂದು ಸರಕಾರಗಳು ಘೋಷಿಸಿದ್ದರೂ ಕೂಡಾ ಸರಕಾರಗಳೇ ಬಹು ಮಹಡಿಗಳ ಕಟ್ಟಡಗಳನ್ನು ಕಟ್ಟಿಸುತ್ತಿವೆ. ನಾಗರಿಕರಿಗೆ ಮೂಲ ಸೌಕರ್ಯಗಳನ್ನು ಒದಗಿಸಲಾರದೆ ಹಲವಾರು ನಗರ ಸಭೆಗಳು ದಿವಾಳಿ ಎದ್ದಿವೆ, ಮುಂಬಯಿ ಮಹಾ ನಗರಪಾಲಿಕೆ 324 ಕೋಟಿ ರೂ.ಗಳಷ್ಟು ಸಾಲ ಮಾಡಿದೆ. ಇದರಲ್ಲಿ 278 ಕೋ. ರೂ. ಸರಕಾರದ ಸಾಲ. ಮಹಾನಗರಗಳು ದೇಶದ ವಿರಳ ಸಂಪನ್ಮೂಲವನ್ನು ಸಂಪೂರ್ಣ ನುಂಗಿ ಹಾಕುತ್ತಿವೆ. ಎಷ್ಟು ಸುರಿದರೂ ಬಕಾಸುರನ ಹೊಟ್ಟೆಯ ಹಾಗೆಯೇ ತುಂಬುವುದೆಂದೇ ಇಲ್ಲ.

ಟ್ರಾಫಿಕ್ ಜಾಮಿನ ಮಹಾನಗರ ಕಲ್ಕತ್ತ

ಮುಂಬಯಿಯ ಕಥೆ ಇದಾದರೆ ಭಾರತದ ಇನ್ನೊಂದು ಪುರಾತನ ಮಹಾ ನಗರವಾದ ಕಲ್ಕತ್ತದ ಕಥೆ ಬೇರೆಯೇ. ಅದು ಇನ್ನೂ ಅಧ್ವಾನ. ಕಲ್ಕತ್ತದಲ್ಲಿ ಸರಕಾರೀ ಕಚೇರಿಗಳು ಇತರ ಸ್ಥಳಗಳಂತೆಯೇ ಬೆಳಗಿನ ಹತ್ತು ಗಂಟೆಗೆ ಆರಂಭವಾಗಬೇಕು. ಆದರೆ ಕಚೇರಿಗಳಿಗೆ ಮೊತ್ತ ಮೊದಲ ನೌಕರ ಬರುವುದು 11ಗಂಟೆಗೆ. ಕಾರಣ ಬಸ್ಸುಗಳಲ್ಲಿ ಜಾಗ ಸಿಗದಿರು

ವುದು ಅಥವಾ 'ಟ್ರಾಫಿಕ್ ಜಾಮ್' ಕಲ್ಕತ್ತದಲ್ಲಿ ಟ್ರಾಫಿಕ್ ಜಾಮ್ ಎಷ್ಟು ಅಸಾಮಾನ್ಯವಾಗಿದೆ ಎಂದರೆ ವಾಹನಗಳು ಯಾವಾಗ ನಿಲ್ಲುತ್ತವೆ ಮತ್ತು ಯಾವಾಗ ಹೊರಡುತ್ತವೆ ಎಂದು ಹೇಳುವಂತಿಲ್ಲ. ವಾಹನ ಮತ್ತು ಜನ ದಟ್ಟಣೆ ಇದಕ್ಕೆ ಮೂಲ ಕಾರಣ.

ಕಲ್ಕತ್ತಕ್ಕೆ ದಿನವೊಂದಕ್ಕೆ 2000ಮಂದಿ ವಲಸೆ ಬರುತ್ತಾರೆ. ತಿಂಗಳಿಗೆ ಸುಮಾರು 25000 ಮತ್ತು ವರ್ಷಕ್ಕೆ ಸುಮಾರು 3,50,000 ಮಂದಿ. ಕಲ್ಕತ್ತದ ಒಟ್ಟು ಜನಸಂಖ್ಯೆಯ ಶೇ. 32.8 ರಷ್ಟು ಮಂದಿ ಕೊಳೆಗೇರಿಗಳಲ್ಲಿ ವಾಸಿಸುತ್ತಿದ್ದಾರೆ. ಮುಂಬಯಿಯ ಶೇ. 34.3ಕ್ಕೆ ಹೋಲಿಸಿದರೆ ಇದು ಬಹಳ ಕಡಿಮೆಎನ್ನಬಹುದು ಆದರೆ ಕಲ್ಕತ್ತ ಭರ್ತಿಯಾಗುವಷ್ಟು ಭರ್ತಿಯಾಗಿದೆ. ಅಲ್ಲಿಗೆ ವಲಸೆ ಬರುವವರೆಲ್ಲ ಕೊಳೆಗೇರಿಗಳ ಜೋಪಡಿಗಳನ್ನೇ ಹಂಚಿಕೊಂಡು ಬದುಕುವ ಪರಿಸ್ಥಿತಿ ಉಂಟಾಗಿದೆ. ಏಕೆಂದರೆ ಅಲ್ಲೀಗ ಖಾಲಿ ಉಳಿದಿರುವ ಸ್ಥಳವೇ ಕಡಿಮೆ. ಜನನಿಬಿಡವಾಗಿರುವ ಕೆಲವು ಪ್ರದೇಶಗಳಲ್ಲಿ ಮಕ್ಕಳಆಟದ ಮೈದಾನಗಳ ಮೇಲೂ ವಾಣಿಜ್ಯ ಸಂಕೀರ್ಣ, ಬಹು ಮಹಡಿ ಕಟ್ಟಡಗಳನ್ನು ಕಟ್ಟಲಾಗಿದೆ. ಈಗ್ಗೆ ಕೆಲವು ವರ್ಷಗಳ ಹಿಂದೆ ಕಲ್ಕತ್ತದ ಪ್ರದೇಶವೊಂದರ ಕೆಲವು ಮಕ್ಕಳು "ನಮಗೊಂದು ಮೈದಾನ ಕೊಡಿ" ಎಂದು ಘೋಷಣೆ ಕೂಗುತ್ತಾ ಸರಕಾರದ ಕೇಂದ್ರ ಕಚೇರಿಯ ಮುಂದೆ ಮೆರವಣಿಗೆ ನಡೆಸಿದ್ದರು. ಸರಕಾರ ಮೈದಾನಕ್ಕಾಗಿ ಸ್ಥಳ ಮೀಸಲಿರಿಸಿದರೂ ರಾತ್ರಿ ಬೆಳಗಾಗುವುದರೊಳಗೆ ಅಲ್ಲಿ ಡೇರೆಗಳು ಮೇಲೇಳುತ್ತವೆ. ಉಳಿದ ಸ್ಥಳ ಸಾರ್ವಜನಿಕ ಶೌಚಾಲಯವಾಗಿ ಮಾರ್ಪಡುತ್ತದೆ.

ಈ ಮಹಾನಗರದ ಎರಡು ಕಿ ಮೀ. ವಿಸ್ತಾರದ ಹೃದಯ ಪ್ರದೇಶದಲ್ಲಿ ಸರಕಾರದ ಎಲ್ಲಾ ಪ್ರಮುಖ ಕಚೇರಿಗಳೂ, ವ್ಯಾಪಾರ ಮತ್ತು ವಾಣಿಜ್ಯ ಸಂಸ್ಥೆಗಳೂ ನೆಲೆ ನಿಂತಿವೆ. ಇಷ್ಟು ಸಣ್ಣ ಪ್ರದೇಶದಲ್ಲಿ ಸುಮಾರು ಐನೂರಕ್ಕೂ ಹೆಚ್ಚು ಕಟ್ಟಡಗಳಿವೆ. ಜನರ ಸಾಗರವೇ ಪ್ರವಹಿಸುತ್ತಿರುತ್ತದೆ. ಈ ಪ್ರದೇಶದಲ್ಲಿ ಸುಮಾರು 32ಲಕ್ಷ ಮಂದಿ ದಿನವೊಂದಕ್ಕೆ ಓಡಾಡುತ್ತಾ ಇರುತ್ತಾರೆ. ಸಾವಿರಾರು ವಾಹನಗಳೂ ಸಂಚರಿಸುತ್ತವೆ. ರಸ್ತೆಗಳಲ್ಲಿ ಬಸ್ಸು, ಲಾರಿ ಮೋಟಾರು, ಟ್ರಾಮ್‌ಗಳು ಮಾತ್ರವಲ್ಲದೆ ಕೈಗಾಡಿಗಳು ಮನುಷ್ಯರು ಎಳೆಯುವ ರಿಕ್ಷಾಗಾಡಿಗಳು ಮತ್ತು ಸೈಕಲುಗಳು ಟ್ರಾಫಿಕ್ ಜಾಮ್‌ಗೆ ತಮ್ಮ ಕೊಡುಗೆಯನ್ನು ಸಲ್ಲಿಸುತ್ತವೆ. ಈ ರಸ್ತೆಗಳಲ್ಲಿ ವಾಹನಗಳು ಚಲಿಸುವ ಅತಿ ಹೆಚ್ಚಿನ ವೇಗವೆಂದರೆ ಗಂಟೆಗೆ 8 ಕಿ ಮೀ ಗಳಷ್ಟು. ರಸ್ತೆಗಳಲ್ಲಿ ಒಂದು ಶತಮಾನವೇ ಹೆಪ್ಪುಗಟ್ಟಿದಂತೆ ಕಾಣುತ್ತದೆ ಎಂದು ನಾಗರಿಕರ ಅನುಭವ.



ಕಲ್ಕತ್ತ ರಕ್ಕಸ ಗಾತ್ರದಲ್ಲಿ ಬೆಳೆಯುತ್ತಿದೆ. ಆದರೆ ಅದೇ ಪ್ರಮಾಣದಲ್ಲಿ ರಸ್ತೆಗಳ ಬೆಳವಣಿಗೆಯಾಗಿಲ್ಲ. ಈ ನಗರಪ್ರದೇಶದ ಶೇ. ಆರರಷ್ಟು ಭಾಗದಲ್ಲಿ ಮಾತ್ರ ವಾಹನ ಸಂಚರಿಸುವಂತಹ ರಸ್ತೆಗಳಿವೆ. ಈ ರಸ್ತೆಗಳಲ್ಲೂ ಗೋದಾಮುಗಳು, ಅಂಗಡಿ ಮಾಲೀಕರು, ಅತಿಕ್ರಮಣಕಾರರು ಬಹು ಸ್ಥಳವನ್ನು ಆಕ್ರಮಿಸಿಕೊಂಡಿದ್ದಾರೆ. ರಸ್ತೆಗಳಲ್ಲಿ ಹೆಚ್ಚುತ್ತಿರುವ ಇಕ್ಕಟ್ಟಿನ ಪರಿಸ್ಥಿತಿ ಮತ್ತು ಕೈಗಾರಿಕೆಗಳು ಉಗುಳುವ ಹೊಗೆಯಿಂದ ವಾಯು ಮಾಲಿನ್ಯ ಅಪಾಯದ ಮಟ್ಟವನ್ನೂ ಮೀರತೊಡಗಿದೆ. ಕಲ್ಕತ್ತದ ಕೆಲವು ಪ್ರದೇಶಗಳಲ್ಲಂತೂ ವಾಯು ಮಾಲಿನ್ಯ ಸಹನೀಯ ಪ್ರಮಾಣವನ್ನು ಮೀರಿ 3 ಪಟ್ಟನಷ್ಟು ಹೆಚ್ಚಿದೆ. ಶಬ್ದ ಮಾಲಿನ್ಯವೂ ಸಹನೀಯ ಮಿತಿಯನ್ನು ಮೀರಿ ಅಪಾಯದ ಮಟ್ಟವನ್ನು ಮುಟ್ಟುತ್ತಿದೆ. ಹಲವಾರು ಕೈಗಾರಿಕೆಗಳ ಮಲಿನ ಜಲವನ್ನು ಶುದ್ಧಗೊಳಿಸುವ ಯಂತ್ರಗಳು ಕೆಟ್ಟು ನಿಂತು ಹಲವಾರು ವರ್ಷಗಳಾಗಿವೆ. ಕೈಗಾರಿಕೆಗಳ ಮಲಿನ ಜಲ ಬಂಗಾಳ ಕೊಲ್ಲಿಯನ್ನು ಸೇರುತ್ತದೆ. ಇದನ್ನು ಸೇವಿಸಿದ ಮೀನುಗಳು ವಿಷಯುಕ್ತವಾಗಿ ಬದಲಾಗುತ್ತವೆ. ಅದನ್ನು ತಿಂದ ಮನುಷ್ಯರೂ ಹಲವಾರು ರೋಗ, ರುಜಿನಗಳಿಗೆ ತುತ್ತಾಗುತ್ತಾರೆ.

ಕಲ್ಕತ್ತದಲ್ಲೂ ಕುಡಿಯುವ ನೀರಿನ ನಳ್ಳಿಗಳಿದ್ದರೂ ಮೈಲುಗಳುದ್ದದ ಸಾಲು ಇರುತ್ತದೆ. ಬೇಸಿಗೆ ಕಾಲದಲ್ಲಷ್ಟೆ ಕೊರತೆಯಾಗುವ ನೀರು ಈಗ ಸದಾ ಕಾಲವೂ ತತ್ವಾರವಾಗುತ್ತಿದೆ. ಎಷ್ಟೋ ಲಕ್ಷಾಂತರ ಮಂದಿಗೆ ನೀರೇ ದೊರೆಯುವುದಿಲ್ಲ. ಕೈ ಮತ್ತು ಬಾಯಿ ಗಟ್ಟಿ ಇರುವವರು ಬೇಕಾದಷ್ಟು ನೀರು ಪಡೆದರೆ ಉಳಿದವರು ಖಾಲಿ ಕೊಡಗಳಲ್ಲೇ ತೃಪ್ತಿ ಪಡಬೇಕಾಗುವುದು ಸಾಮಾನ್ಯ ಸಂಗತಿ.

ಪಡಿತರ ಸಾಮಗ್ರಿಗಳ ವಿತರಣೆಯೂ ತೀರಾ ಅಸಮರ್ಪಕವಾಗಿದೆ. ಪಡಿತರ ಸಾಮಗ್ರಿಗಳಪ್ರಮಾಣಕಡಿತತೀರಾ ಸಾಮಾನ್ಯ ಸಂಗತಿ. ಪಡಿತರ ಚೀಟಿಯ ಮೂಲಕ ಇತ್ತೀಚೆಗೆ ವಿತರಿಸಲಾದ 'ರೇಪ್ಸೀಡ್' ಎಂಬ ಅಡಿಗೆ ಎಣ್ಣೆ ಕಲಬೆರಕೆಯಾಗಿ ಹಲವಾರು ಮಂದಿ ಜೀವನ್ಮರಣ ಪರಿಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಪಡಿತರ ಮೂಲಕ ವಿತರಣೆಯಾಗುವ ಸಾಮಗ್ರಿಗಳ ಮೇಲೂ ಜನರ ನಂಬಿಕೆ ಕುಸಿಯತೊಡಗಿದೆ.

ಕಲ್ಕತ್ತದ ಜನಸಂಖ್ಯೆಯ ಶೇ. 37.1 ರಷ್ಟು ಮಂದಿಗೆ ವಿದ್ಯುತ್ ಸೌಲಭ್ಯವಿಲ್ಲ ಶೇ. 66.9 ಮಂದಿಗೆ ನಳ್ಳಿನೀರು ದೊರಕುವುದಿಲ್ಲ. ಶೇ. 50 ರಷ್ಟು ಮಂದಿಗೆ ಶೌಚಾಲಯಗಳಿಲ್ಲ. ಏರುತ್ತಿರುವ ಜನಸಂಖ್ಯೆಯ ಪ್ರಮಾಣವನ್ನು ನೋಡಿದರೆ ಇನ್ನೊಂದು 2 ಅಥವಾ 3 ವರ್ಷಗಳಲ್ಲಿ ಈ ವ್ಯವಸ್ಥೆಯೂ ಸಾಕಾಗದೆ. ಜನಸಂಖ್ಯೆಯ ಶೇ.1 ಅಥವಾ 2 ಭಾಗದಷ್ಟು ಜನರಿಗೆ ಮಾತ್ರ ಈ ವ್ಯವಸ್ಥೆಯ ಪ್ರಯೋಜನ ದೊರಕಬಹುದು. 1981ರಲ್ಲಿ ಕಲ್ಕತ್ತದ ಜನಸಂಖ್ಯೆ 91ಲಕ್ಷವಿತ್ತು. 1987ರ ಕೊನೆಗೆ ಅದು ಒಂದು ಕೋಟಿ ದಾಟಿದೆ.

—ಕಟ್ಟಡ ಕುಸಿತ: ಇಲ್ಲಿ ವಿಶ್ವಕರ್ಮ

1951 ರಲ್ಲಿ ಕಲ್ಕತ್ತದ ಜನಸಂಖ್ಯೆ 39 ಲಕ್ಷವಿತ್ತು. 1981 ರಲ್ಲಿ 91 ಲಕ್ಷಕ್ಕೇರಿತು. 1991ರ ಹೊತ್ತಿಗೆ ಅದು 1.18 ಕೋಟಿಗೇರಿ, 2001ರ ಹೊತ್ತಿಗೆ 1.49 ಕೋಟಿಗೇರುವ ನಿರೀಕ್ಷೆ ಇದೆ.

ಇಕ್ಕಟ್ಟಿನ ರಸ್ತೆಗಳು, ಅದರಲ್ಲಿ ವಾಹನಗಳು, ಜನರು, ಅಲ್ಲಲ್ಲಿ ಕಸದ ರಾಶಿಗಳು ಅದನ್ನು ಕೆದಕುವ ಹಂದಿಗಳು, ರಸ್ತೆಯ ಮಧ್ಯದಲ್ಲೇ ಬಾಯಾಡಿಸುತ್ತಾ ನಿಂತಿರುವ ದನಗಳು, ಇವು ಕಲ್ಕತ್ತದ ರಸ್ತೆಗಳ ದೃಶ್ಯ. ರಸ್ತೆಗಳ ಮೇಲೆ 1981 ರಲ್ಲಿ 1.93 ಲಕ್ಷ ವಾಹನಗಳು ಸಂಚರಿಸುತ್ತಿದ್ದರೆ 1986 ರ ಹೊತ್ತಿಗೆ 3.58 ಲಕ್ಷ ವಾಹನಗಳು ಸಂಚರಿಸುತ್ತಿದ್ದವು. ಜನಸಂಖ್ಯೆಗೆ ಸರಿಯಾದ ಬಸ್ಸುಗಳಿಲ್ಲ. ಸರಕಾರಿ ಸಾರಿಗೆ ಸಂಸ್ಥೆಯೂ ಕೈ ಚೆಲ್ಲಿ ಕುಳಿತಿದೆ. ಹಾಗಾಗಿಯೇ ಗುಜರಿ ಎಂದು ಗ್ಯಾರೇಜಿಗೆ ಸೇರಿಸಲ್ಪಟ್ಟಿರುವ ಬಸ್ಸುಗಳೂ ಮತ್ತೆ ಮದುಮಗನ ಹಾಗೆ ಅಲಂಕಾರ ಮಾಡಿಕೊಂಡು ರಸ್ತೆಯ ಮೇಲೆ ಮೆರವಣಿಗೆ ಹೋಗುತ್ತವೆ.

ಬೆಳೆಯುವ ಜನ ಮತ್ತು ವಾಹನ ಸಂಖ್ಯೆಗಳಿಗೆ ಸರಿಯಾಗಿಯೇ ಅಪರಾಧಗಳೂ ಸಂಭವಿಸುತ್ತವೆ. ಇಡೀ ಕಲ್ಕತ್ತ ನಗರದಾದ್ಯಂತ ದಿನವೊಂದಕ್ಕೆ ನಡೆಯುವ ವಾಹನ ಅಪಘಾತಗಳೆಷ್ಟು, ಅದರಲ್ಲಿ ಸತ್ತವರು ಮತ್ತು ಗಾಯಗೊಂಡವರೆಷ್ಟು ಎಂಬುದರ ವಿವರ ಅಂದಾಜು ಅಧಿಕಾರಿಗಳಿಗೇ ಸಿಗುತ್ತಿಲ್ಲ. ಸಂಚಾರ ನಿಯಂತ್ರಣವೂ ಕೈ ಸೋತು ಕೈಚೆಲ್ಲಿದೆ. ಆದರೆ ಕೊಲೆ ದರೋಡೆ, ಮಾನಭಂಗದಂತಹ ಅಪರಾಧಗಳು ಮಾತ್ರ ಏರುತ್ತಲೇ ಇವೆ. 1961 ರಲ್ಲಿ ಕಲ್ಕತ್ತದಲ್ಲಿ 14,161 ಹೇಯ, ಮತ್ತು ಘೋರ ಅಪರಾಧಗಳು ನಡೆದಿದ್ದವು. 1981 ರಲ್ಲಿ ದಾಖಲಾದ ಅಪರಾಧಗಳ ಸಂಖ್ಯೆ 13,951. ದಾಖಲಾಗದೆ, ಗಮನಕ್ಕೆ ಬಾರದೇ ಮತ್ತಿತರ ಕಾರಣಗಳಿಂದ ಲೆಕ್ಕಕ್ಕೆ ಸೇರದ ಅಪರಾಧಗಳ ಸಂಖ್ಯೆ ಗೊತ್ತಿಲ್ಲ. ಇದು ಕಲ್ಕತ್ತವೆಂಬ ಪುರಾತನ ನಗರದ ಇಂದಿನ ನರಕ.

ಹೊಟ್ಟೆ ಡುಮ್ಮಣ್ಣರ ನಗರ-ದಿಲ್ಲಿ

ರಾಜಧಾನಿ ದಿಲ್ಲಿಯೂ ಜನಸಂಖ್ಯೆ ಮತ್ತು ವಾಹನ, ಹೊಗೆ, ಮಂಜು, ಧೂಳು ಇತ್ಯಾದಿಗಳಿಂದ ತತ್ತರಿಸುತ್ತಿದೆ. ಉತ್ತರ ಭಾರತದ ಹವೆಯೇ ಹಾಗೆ-ಬೇಸಿಗೆಯಲ್ಲಿ ವಿಪರೀತ ಸೆಖೆ ಬಿಸಿಲಿನ ಝಳಕ್ಕೆ ತತ್ತರಿಸಿ ಸಾಯುವವರು ಹಲವರು. ಚಳಿಗಾಲದಲ್ಲಿ ವಿಪರೀತ ಚಳಿ ಚಳಿಯಿಂದ ಸಾಯುವವರು ಇನ್ನಷ್ಟು ಮಂದಿ ಹಾಗೆಯೇ ಹಿಮಪಾತ, ಹಿಮಪಾತದಿಂದ ಕೆಲವು ಸಲ ರಸ್ತೆ ಸಂಪರ್ಕವೇ ಹಲವು ದಿನಗಳ ಕಾಲ ಕಡಿದು ಹೋಗವುದಿದೆ. ಉತ್ತರ ಭಾರತದಲ್ಲಿ ಪ್ರಕೃತಿ ಯಾವಾಗಲೂ ಮುನಿಸಿಕೊಂಡೇ ಇರುತ್ತದೆ. ಕಾರ್ಖಾನೆಗಳ ಹೊಗೆ, ವಾಹನಗಳಿಂದ ಎದ್ದ ಧೂಳು ಮುಂತಾದವುಗಳು ದಿಲ್ಲಿಯ ವಿಶೇಷ. ಉತ್ತರ ಭಾರತದ ಇತರೆಡೆಗಳಿಂದ ಪ್ರತ್ಯೇಕವಾಗಿರುವ ಅಂಶ. ದಿಲ್ಲಿಯಲ್ಲಿ ಇತ್ತೀಚಿನ ದಿನಗಳಲ್ಲಿ ಸೂರ್ಯನನ್ನು ಮರೆಮಾಡುವ ಅಂಶ-ಮೋಡವಲ್ಲ. ಧೂಳು ಮತ್ತು ಹೊಗೆಯ ಕಣಗಳು. ಹಲವು ಗಂಟೆಯ ಕಾಲ ಅವು ಸೂರ್ಯನನ್ನು ಮರೆ ಮಾಡುತ್ತವೆ.

ದ್ರೌಪದಿಗೆ ಗಂಡಂದಿರು ಐವರು ಮಾತ್ರ. ದಿಲ್ಲಿಗೆ ಹಲವಾರುಮಂದಿ ಎನ್ನುವುದು ಆಡಳಿತದಿಂದ ನೊಂದು ಬಸವಳಿದ ಹಲವು ನಾಗರಿಕರ ವ್ಯಂಗ್ಯ. ಆಡಳಿತವಿದ್ದೂ ಆಡಳಿತವಿಲ್ಲವೇ ಇಲ್ಲ ಎನಿಸುವಂಥ ಪರಿಸ್ಥಿತಿ.

1951ರಲ್ಲಿ ದಿಲ್ಲಿಯ ಜನಸಂಖ್ಯೆ 14 ಲಕ್ಷ, 1961ರಲ್ಲಿ 23 ಲಕ್ಷ, 1971ರಲ್ಲಿ 36 ಲಕ್ಷ, 1981ರಲ್ಲಿ 57 ಲಕ್ಷ, 1991 ರ ಹೊತ್ತಿಗೆ ಅದು 88 ಲಕ್ಷವನ್ನೂ ದಾಟುವ ನಿರೀಕ್ಷೆ ಇದೆ; ದಿಲ್ಲಿಗೆ ಒಂದು ವರ್ಷದಲ್ಲಿ 1.2ಲಕ್ಷದಷ್ಟು ಮಂದಿ ವಲಸೆ ಬರುತ್ತಾರೆ. ಇದರಿಂದಾಗಿ ದಿಲ್ಲಿಯ ಎಲ್ಲಾ ವ್ಯವಸ್ಥೆಗಳೂ ಹದಗೆಟ್ಟು ಹೋಗಿವೆ. ಸ್ವಾಭಾವಿಕ ಜನನ ಪ್ರಮಾಣ ಮತ್ತು ಜನರ ಅವ್ಯಾಹತ ವಲಸೆಗಳಿಂದಾಗಿ 1951ರಿಂದ 81ರ ವರೆಗಿನ ಮೂರು ದಶಕಗಳಲ್ಲಿ ದಿಲ್ಲಿಯ ಜನಸಂಖ್ಯೆ ವರ್ಷಕ್ಕೆ ನೂರಕ್ಕೆ 15ರಷ್ಟು ಹೆಚ್ಚುತ್ತಲೇ ಇದೆ. ದಿಲ್ಲಿಯ ಒಟ್ಟು ಜನಸಂಖ್ಯೆಯ ಶೇ.31 ರಷ್ಟು ಮಂದಿ ಕೊಳೆಗೇರಿಗಳಲ್ಲಿ ವಾಸಿಸುತ್ತಿದ್ದಾರೆ. ನಗರಗಳಿಗೆ ತಾಗಿಕೊಂಡು ಬೆಳೆಯುತ್ತಿರುವ ಉಪನಗರಗಳಿಂದಾಗಿ ವಾಹನ ವ್ಯವಸ್ಥೆ ಸಂಪೂರ್ಣ ಕುಸಿದಿದೆ. ಐದೇ ವರ್ಷಗಳ ಅವಧಿಯಲ್ಲಿ ದಿಲ್ಲಿ ಸಾರಿಗೆ ನಿಗಮವು ತನ್ನ ವಾಹನಗಳ ಸಂಖ್ಯೆಯನ್ನು ದುಪ್ಪಟ್ಟುಗೊಳಿಸಿದೆ. ಈಗ ಅದು ದಿನವೊಂದರ 50 ಲಕ್ಷ ಪ್ರಯಾಣಿಕರನ್ನು ಸಾಗಿಸುತ್ತಿದೆ. ಕಾರು, ವ್ಯಾನು, ಮೋಟಾರ್‌ಗಳೂ ಪ್ರಯಾಣಿಕರನ್ನು ಸಾಗಿಸುತ್ತವೆ. ಆದರೂ ಬಹಳಷ್ಟು ಮಂದಿಗೆ ಸಮಯಕ್ಕೆ ಸರಿಯಾಗಿ ಕಚೇರಿಗಳಿಗೆ ತಲುಪಲಾಗುತ್ತಿಲ್ಲ. ಬದುಕಿನ ಬಹುತೇಕ ಸಮಯವನ್ನು ವಾಹನಗಳನ್ನು ಕಾಯುವುದರಲ್ಲಿ ಕಳೆಯಬೇಕಾದ ಪರಿಸ್ಥಿತಿ. ಜನಸಂಖ್ಯೆಯ ಬೆಳವಣಿಗೆಯೊಂದಿಗೆ ಹೊಂದಿಕೊಳ್ಳಲು ವಾಹನ ಸಂಚಾರ ನಿಗಮಕ್ಕೆ ಸಾಧ್ಯವಾಗಿಲ್ಲ. ಕೆಲವು ರೂಟುಗಳಲ್ಲಿ ನಿಗಮ ಪ್ರತಿ ನಿಮಿಷಕ್ಕೆ 11 ಬಸ್ಸುಗಳನ್ನು ಓಡಿಸುತ್ತಿದೆ. ಆದರೂ ಬಸ್‌ಗೆ ಕಾಯುವುದರ ಸಂಖ್ಯೆ ಏನೇನೂ ಕಡಿಮೆಯಾಗುತ್ತಿಲ್ಲ. ನಿಗಮದ ಕಾಲಂಶದಷ್ಟು ವಾಹನಗಳ ಕಾರ್ಯ ಸಾಮರ್ಥ್ಯ ಎಂದೋ ಉಡುಗಿ ಹೋಗಿದೆ. ಆದರೂ ಜನರ ಒತ್ತಡದಿಂದಾಗಿ ರಸ್ತೆಗಳಿಂದ ಅಂತರ್ಧಾನವಾಗುವ ಸುಮುಹೂರ್ತ ಅವುಗಳಿಗಿನ್ನೂ ಪ್ರಾಪ್ತವಾಗಿಲ್ಲ.

ಜಲಮಾಲಿನ್ಯ ಮತ್ತು ಕಸದ ಗುಂಡಿಗಳು ತುಂಬಿ ತುಳುಕಿ ವಾಸನೆ ಬೀರುತ್ತಿರುವುದು ಮತ್ತು ರಸ್ತೆಗಳ ಮೇಲೂ ಚೆಲ್ಲಿರುವುದರಿಂದ ದಿಲ್ಲಿಯ ಪ್ರತಿ ಮೂರು ಮಂದಿಯಲ್ಲೊಬ್ಬ ಊದು ಹೊಟ್ಟೆ ಕಾಯಿಲೆಯಿಂದ ನರಳುತ್ತಿದ್ದಾನೆ. ದಿಲ್ಲಿಯಲ್ಲಿ ಇತರ ಸಮಸ್ಯೆಗಳೂ ಇವೆ. ನಗರಪಾಲಿಕೆ ರಸ್ತೆಯೊಂದರ ಡಾಮರು ಬಳಿಯುತ್ತದೆ. ಆ ಕೆಲಸ ಪೂರೈಸುವುದಕ್ಕೆ ಟೆಲಿಫೋನ್ ಇಲಾಖೆ ಕೇಬಲ್ ಜೋಡಣೆಗಾಗಿ ರಸ್ತೆಯನ್ನು ಅಗೆಯತೊಡಗುತ್ತದೆ. ಈ ಗುಂಡಿಗೆ ಅನ್ನು ಮುಚ್ಚಲು ಮತ್ತೆ ಮುಂದಿನ ವರ್ಷ ನಗರಪಾಲಿಕೆಯ ಡಾಮರು

ಕಾರ್ಯಕ್ರಮವೇ ಬರಬೇಕು. ಇದಲ್ಲದೆ ಕಿಕ್ಕಿರಿದ ಜನಭರಿತ ಕನಾಟ್ ಪ್ಲೇಸ್ ನಂತಹ ಸ್ಥಳಗಳಲ್ಲಿ ಸರಕಾರದ ವಿವಿಧ ಇಲಾಖೆಗಳು ಬಹು ಮಹಡಿ ಕಟ್ಟಡಗಳನ್ನು ಕಟ್ಟಿಸ ತೊಡಗುತ್ತವೆ. ದೇಶದ ಆಡಳಿತದ ಮೂಗಿನಡಿಯಲ್ಲಿ ಇವೆಲ್ಲ ನಡೆಯುತ್ತಿದ್ದರೂ ಯಾರಿಗೂ ಇದರ ಬಗ್ಗೆ ಗಮನ ಹರಿಯುವುದಿಲ್ಲ.

ದಿಲ್ಲಿಯ ಜನಸಂಖ್ಯೆಯ ಶೇ. 25 ರಷ್ಟು ಮಂದಿಗೆ ವಿದ್ಯುತ್ ದೊರಕುವುದಿಲ್ಲ. ಶೇ. 49 ಮಂದಿಗೆ ನಳ್ಳಿ ನೀರಿಲ್ಲ. ಶೇ. 32 ಮಂದಿಗೆ ಶೌಚಾಲಯಗಳಿಲ್ಲ. ಈ ಮೂಲ ಸೌಕರ್ಯಗಳ ಸುಧಾರಣೆಗೆ, ಸರಕಾರ ಪ್ರಯತ್ನಿಸಿದಷ್ಟು ಜನಸಂಖ್ಯೆ ಹೆಚ್ಚುತ್ತಲೇ ಇರುತ್ತದೆ. ಸರಕಾರ ಈಗ ಈ ಮೂಲ ಸೌಕರ್ಯಗಳನ್ನು ಸುಧಾರಿಸುವುದಕ್ಕಲ್ಲ– ಒದಗಿಸುವುದಕ್ಕಾಗಿ ಮಾತ್ರ ತಾನು ಸಂಗ್ರಹಿಸುವ ತೆರಿಗೆ ಮೊತ್ತಕ್ಕಿಂತ 500 ಕೋಟಿ ರೂ.ಗಳನ್ನು ಹೆಚ್ಚುವರಿಯಾಗಿ ವೆಚ್ಚ ಮಾಡುತ್ತಿದೆ. ಆದರೂ ಸರಕಾರ ಈ ಕೆಲಸದಲ್ಲಿ ಸಫಲವಾಗಿಲ್ಲ.

ದೇಶದ ರಾಜಧಾನಿಯಲ್ಲಿ ಕಸದ ರಾಶಿ ಮತ್ತು ಕೊಳೆಗೇರಿಗಳು ಬೆಳೆಯುತ್ತಿವೆ. 1976ರಲ್ಲಿ ಸಂಜಯ್‌ಗಾಂಧಿ ಕೆಲವು ಕೊಳೆಗೇರಿಗಳನ್ನು ಬುಲ್‌ಡೋಜರ್‌ಗಳ ಮೂಲಕ ನೆಲ ಸಮ ಮಾಡಿದ್ದರೂ ಕೊಳೆಗೇರಿಗಳ ಬೆಳವಣಿಗೆ ತೀವ್ರ ವಾಗುತ್ತಲೇ ಇದೆ. ಎಲ್ಲಾ ಮಹಾನಗರಗಳ ಕೊಳೆಗೇರಿಗಳ ಪರಿಸ್ಥಿತಿಯೂ ಮುಂಬಯಿಗಿಂತ ವಿಭಿನ್ನವಾಗೇನೂ ಇಲ್ಲ. ತೆರೆದ ಚರಂಡಿಗಳೇ ಶೌಚಾಲಯಗಳು, ಹರಿದ ಗೋಣಿಯ ಬಾಗಿಲುಗಳು; ಜಿಂಕ್ ತಗಡಿನ ಚಾವಣಿಗಳು; ಪತ್ರಿಕೆಗಳೇ ಚಾಪೆ; ಕೈಗಳೇ ತಲೆದಿಂಬು ಎಲ್ಲಾ ಕ್ರಿಯೆಗಳು ಒಂದೇ ಕೋಣೆಯ ಈ 'ಅರಮನೆ' ಗಳಲ್ಲೇ, ಸೌದೆಯೇ ಸಿಗದಿದ್ದಲ್ಲಿ ಮಾಡಿನ ಮರದ ತುಂಡುಗಳು ನೇರ ಒಲೆಯೊಳಗೆ ಹೋಗುವುದೂ ಇದೆ.

[illegible] ಹೋಗಿ ಪೀಡಿತ ಪ್ರದೇಶಗಳಿಗೆ ಪ್ರಧಾನಿ ರಾಜೀವ ಗಾಂಧಿ ಭೇಟಿ ನೀಡಬೇಕಾಯಿತು. ದಿಲ್ಲಿಯ ಲೆಫ್ಟಿನೆಂಟ್ ಗವರ್ನರ್ ಕಪೂರ್ ರಾಜೀನಾಮೆ ಕೊಡಬೇಕಾಯಿತು. ಹಲವು ಅಧಿಕಾರಿಗಳ ತಲೆ ಉರುಳಬೇಕಾಯಿತು.

ಇಂತಹ ಮಹಾನಗರ ತನ್ನ ಗಾತ್ರಕ್ಕೆ ಸರಿ ಹೊಂದುವಂತೆ ಅಪರಾಧಗಳ ಪ್ರಮಾಣದಲ್ಲೂ ಮುಂದಿದೆ. ಹೆಂಗಸರ ಮೇಲೆ ಅತ್ಯಾಚಾರ ನಡೆಸುವ ಪ್ರಕರಣಗಳು ದೇಶದ ಎಲ್ಲಾ ನಗರಗಳಲ್ಲೂ ನಡೆಯುತ್ತವೆ. ಆದರೆ ಸಣ್ಣ, ಅಪ್ರಾಪ್ತ ವಯಸ್ಸಿನ ಹುಡುಗಿಯರ ಮೇಲೆ ಅತ್ಯಾಚಾರ ನಡೆಯುವುದು ದಿಲ್ಲಿಯ ವಿಶೇಷ. ಇಂತಹ ಅತ್ಯಾಚಾರ ನಡೆಸಿದ ರಂಗ ಮತ್ತು ಬಿಲ್ಲರನ್ನು ಗಲ್ಲಿಗೇರಿಸಿದ ಘಟನೆ ಮನಃಪಟಲದಿಂದ ಅಳಿಸಿ ಹೋಗುವಂಥದ್ದಲ್ಲ. ಇದು ಕೆಲವು ವರ್ಷಗಳ ಹಿಂದಿನ ಘಟನೆ.ತನ್ನ ಪ್ರೇಯಸಿ ಪರನಾರಿಯನ್ನು ಹೊಂದಲು ವ್ಯಕ್ತಿಯೊಬ್ಬನು ಆಕೆಯ ಗಂಡನನ್ನು, ಇಬ್ಬರು ಮಕ್ಕಳನ್ನು ಕೊಂದು ಹಾಕಿದ ಘಟನೆ ಇತ್ತೀಚಿನದು. ಇದಲ್ಲದೆ ಕಳೆದ ಹಾಗೆ 16 ವರ್ಷ ಕಾಲ ದೇಶದ ಆಡಳಿತ ನಡೆಸಿದ ಪ್ರಧಾನಿ ಇಂದಿರಾಗಾಂಧಿ ಅವರನ್ನು ಹಾಡು ಹಗಲಲ್ಲೆ ಗುಂಡು ಹಾರಿಸಿ ಕೊಂದ ಸ್ಥಳವೂ ದಿಲ್ಲಿಯೇ. ಇಲ್ಲಿ ಯಾವಾಗ, ಯಾರನ್ನು ಯಾಕೆ ಕೊಲೆ ಮಾಡುತ್ತಾರೆನ್ನುವುದು ಕೊನೆಗೂ ಗೊತ್ತೇ ಆಗುವುದಿಲ್ಲ. ಅದು ಸ್ವಾಭಾವಿಕ ಸಾವೇ, ಆತ್ಮಹತ್ಯೆಯೇ, ಕೊಲೆಯೇ ಎಂಬುದೂ ಗೊತ್ತಾಗುವುದಿಲ್ಲ.

ದಿಲ್ಲಿಯಲ್ಲಿ 1961 ರಲ್ಲಿ 9,983 ಹೇಯ ಅಪರಾಧಗಳು ನಡೆದಿದ್ದರೆ 1971 ರಲ್ಲಿ 26,433 ಅಪರಾಧಗಳು ನಡೆದಿದ್ದವು. 1981ರ ಹೊತ್ತಿಗೆ ಅದು 29,311 ನ್ನು ದಾಟಿತ್ತು, 1986ರ ಹೊತ್ತಿಗೆ 34,000 ದ ಗಡಿ ಮುಟ್ಟಿರುವುದು ದಿಲ್ಲಿಯಲ್ಲಿ ಕಾನೂನು ಮತ್ತು ವ್ಯವಸ್ಥೆಯ ಪಾಲನೆ ಎಷ್ಟು ದುರ್ಬಲವಾಗಿದೆ ಎಂಬುದನ್ನು ಸೂಚಿಸುತ್ತದೆ. ದೇಶದ ರಾಜಧಾನಿಯಲ್ಲಿ ಹೀಗಾದರೆ ಉಳಿದೆಡೆಗಳಲ್ಲಿ ಹೇಗಿರಬಹುದೆಂಬುದು ಚಿಂತನಾರ್ಹವಾದ ವಿಷಯ.

ದಿಲ್ಲಿಯಲ್ಲಿ 1981ರಲ್ಲಿ 5.35 ಲಕ್ಷ ವಾಹನಗಳಿದ್ದರೆ 1986ರಲ್ಲಿ ಅದು 10.42 ಲಕ್ಷಕ್ಕೇರಿದೆ. ದಿಲ್ಲಿ ಸಾರಿಗೆ ಸಂಸ್ಥೆ 4,263 ಬಸ್ಸುಗಳನ್ನು ಪ್ರಯಾಣಕ್ಕೆ ಒದಗಿಸಿದೆ. ಅವುಗಳಲ್ಲಿ 839 ಬಸ್‌ಗಳು ಎಂದೋ ಪರಂಧಾಮ ಸೇರಬೇಕಾದಂತಹವು. ಜಲ,ಶಬ್ದ ಮತ್ತು ಇತರ ಮಾಲಿನ್ಯಗಳು ಅಪಾಯದ ಮಟ್ಟವನ್ನು ದಾಟುತ್ತಿದೆ. ಸಾಂಕ್ರಾಮಿಕ ರೋಗಗಳು ಸ್ಫೋಟಗೊಂಡಲ್ಲಿ ನೂರಾರು ಮಂದಿ ಸಾಯದೆ ನಿಯಂತ್ರಣಕ್ಕೆ ಬರುವುದಿಲ್ಲ. ರೋಗ ಗಂಭೀರ ಸ್ವರೂಪದ್ದೆ ಅಥವಾ ಸಾಮಾನ್ಯ ಸ್ವರೂಪದ್ದೆ ಎಂದು ಗೊತ್ತಾಗುವುದೇ ಹಲವು ಜೀವಗಳ ಉಸಿರಾಟ ನಿಲ್ಲಿಸಿದ ಬಳಿಕವೇ. 1987ರಲ್ಲಿ ಬಂದ 'ಕಾಲರಾ' ಮಹಾ ಮಾರಿಯೇ ಇದಕ್ಕೆ ಉದಾಹರಣೆ. ನೂರಾರು ಮಂದಿ ಸತ್ತು, ಸಾವಿರಾರು ಮಂದಿ ಆಸ್ಪತ್ರೆಗಳಿಗೆ ದಾಖ

ತಣ್ಣಿ ಬಂಡಿಗಳ ನಗರ–ಮದರಾಸು

ಇಲ್ಲಿಯವರೆಗೆ ಪರಿಶೀಲನೆಗೊಳಗಾದವುಗಳು ಉತ್ತರ ಮತ್ತು ಮಧ್ಯ ಭಾರತದ ನಗರಗಳು. ಈಗ ನಾವು ಹೋಗುತ್ತಿರುವುದು ನಮ್ಮ ನೆರೆಯ ಮದರಾಸು ಮಹಾ ನಗರಕ್ಕೆ. ಉತ್ತರ ಭಾರತದ ಹವಾಮಾನದಲ್ಲಿ ವ್ಯತ್ಯಾಸವಿರುವಂತೆ ತಮಿಳುನಾಡಿನ ಭೂಗುಣದಲ್ಲೂ ವ್ಯತ್ಯಾಸವಿದೆ. "ಭಾರತ ದೇಶದ ಕಣಜ"ವೆಂದೇ ಹೆಸರಾಗಿರುವ ತಂಜಾವೂರು ಇರುವುದು ಇದೇ ನಾಡಿನಲ್ಲಿ. ತಮಿಳುನಾಡಿನ ಬಹುತೇಕ ಪ್ರದೇಶಗಳ ನೀರು ಉಪ್ಪು. ಖಾಸಗಿ ಮನೆಗಳ ಅಂಗಳದಲ್ಲಿರುವ ಬಾವಿಗಳಲ್ಲೂ ಇದೇ ನೀರು. ಇದನ್ನು ಕುಡಿದರೆ ದಾಹ ಹೆಚ್ಚಾಗುವುದೇ ಹೊರತು ನಿವಾರಣೆಯಾಗುವುದಿಲ್ಲ. ಸ್ನಾನ ಮಾಡಿದರೂ ಹಾಗೇ.

[illegible] ಸಾಧ್ಯಂತ ಅಲ್ಲಲ್ಲಿ ಇರುವ ಅಣೆಕಟ್ಟುಗಳು ಆಗಾಗ ಪೂರೈಸುವ ನೀರಿನ ಮೂಲಕವೇ ಬೆಳೆ, ಸ್ನಾನ, ಪಾನ ಇತ್ಯಾದಿ. ಕೆಲವು ಗ್ರಾಮಾಂತರ ಪ್ರದೇಶಗಳಲ್ಲಿ ವಿಶಾಲವಾದ ಕೆರೆಗಳಿರುತ್ತವೆ. ಅವುಗಳನ್ನು 'ತೆಪ್ಪ ಕೊಳಂ' ಎಂದು ಕರೆಯುತ್ತಾರೆ. ಅಲ್ಲಿ ಸಿಹಿ ನೀರು ಲಭ್ಯ. ಅದರ ಸುತ್ತಲೂ ಕಟ್ಟೆ. 'ಕೊಳದೊಳಕ್ಕೆ ಇಳಿಯುವಂತಿಲ್ಲ' ಸ್ನಾನ–ಪಾನ ಇತ್ಯಾದಿಗಳೆಲ್ಲಕ್ಕೂ ಕಟ್ಟೆಯ ಆಚೆ ಬದಿಯಲ್ಲಿ ನಿಂತೇ ನೀರು ಸೇದಬೇಕು. ಅಲ್ಲೆ ನಿಂತು ಸ್ನಾನವನ್ನು, ಬಟ್ಟೆ ಒಗೆಯುವುದನ್ನು ಪೂರೈಸಬೇಕು. ಬೆಳಗ್ಗಿನ ಆರರಿಂದ ಒಂಭತ್ತರವರೆಗೆ ಈ ಕೊಳಗಳ ಬಳಿ ಸುಳಿದರೆ ಸಾಕು–ಆ ಪ್ರದೇಶಗಳ ಒಟ್ಟು ಜನಸಂಖ್ಯೆಯನ್ನು ಲೆಕ್ಕ ಹಾಕಿ ಬಿಡಬಹುದು. ಹಾಗೆಯೇ ಹೊಟೇಲುಗಳಿಗೂ, ಶುಭ ಕಾರ್ಯಗಳಿಗೂ ಈ ತೆಪ್ಪಕೊಳದ ನೀರೇ ಮೂಲಾಧಾರ. ಒಂಟೆತ್ತಿನ ಬಂಡಿಯ ಮೇಲೆ ದೊಡ್ಡ ಪೀಪಾಯಿಗಳನ್ನು ಹೇರಿ ನೀರು ಸಂಗ್ರಹಿಸಲಾಗುತ್ತದೆ. ಗಾಡಿಗೊಬ್ಬ ಸವಾರನೂ ಇರುತ್ತಾನೆ. ಗಾಡಿಗೆ ದಿನವಿಡೀ ನೀರು ಪೂರೈಸುವುದೇ ಕೆಲಸ. ಇಂತಹ ಗಾಡಿಗಳನ್ನು "ತಣ್ಣಿ ಬಂಡಿ"ಗಳೆಂದು ಕರೆಯುತ್ತಾರೆ. ತಮಿಳು ನಾಡಿನಲ್ಲೆಲ್ಲ ಈ ಬಂಡಿಗಳು ಸಾಮಾನ್ಯ ನೋಟ.

ಇಂತೊಪ್ಪುವ ತಮಿಳುನಾಡು ಸಂಸ್ಥಾನದ ಮಹಾನಗರ ಮದರಾಸು (ತಮಿಳಿನಲ್ಲಿ "ಸೆನ್ನೈ"). ಐತಿಹಾಸಿಕ ನಗರ. ಬೆಳಗ್ಗೆ ಎದ್ದು ತೆಪ್ಪಕೊಳದಲ್ಲಿ ಮಿಂದು ದಟ್ಟ ವಿಭೂತಿ ಲೇಪಿಸಿಕೊಂಡೇ ಹೊರಗೆ ಹೊರಡುವಷ್ಟು ಸಂಪ್ರದಾಯಸ್ಥರ ನೆಲೆವೀಡು. ಸ್ನಾನ ಮಾಡದೇ ಇದ್ದರೂ ಹಣೆಯ ಮೇಲೆ ದಪ್ಪ ಗಾತ್ರದ ವಿಭೂತಿ ಪಟ್ಟಿ ಇರಲೇ ಬೇಕು. ಇದು ಈ ರಾಜ್ಯದ ವೈಶಿಷ್ಟ್ಯ. ಆಧುನಿಕತೆಗೆ ತೀರಾ ನಿಧಾನವಾಗಿ ತೆರೆದುಕೊಳ್ಳುವ ನಗರ. ಕನಸುಗಳ ತವರು ಮನೆ. ದೇಶದ ಇತರ ಭಾಗಗಳು ಒಂದು ಶತಮಾನದಷ್ಟು ಮುಂದಿದ್ದರೂ ಮದರಾಸು ಮಾತ್ರ ಇನ್ನೂ ಹಿಂದಿನ ಶತಮಾನದ ಅಂತಿಮ ಭಾಗದಲ್ಲೇ ತೆವಳುತ್ತಿರುತ್ತದೆ. ಇದು ಮದರಾಸು.

ಇಂತಹ ಮದರಾಸು ಕೂಡಾ ತನ್ನ ಗಾತ್ರವನ್ನು ಮೀರಿ ಬೀಗುತ್ತಿದೆ. ದಿನವೊಂದಕ್ಕೆ ಸುಮಾರು 1,000 ಮಂದಿ ಈ ನಗರಕ್ಕೆ ವಲಸೆ ಬರುತ್ತಾರೆ. ಕೊಳೆಗೇರಿಗಳು ತಲೆ ಎತ್ತಿ ನಿಲ್ಲತೊಡಗಿವೆ. ವರ್ಷವೊಂದಕ್ಕೆ ಹಲವು ಕೊಳೆಗೇರಿಗಳು ಹೊಸದಾಗಿ ತಲೆ ಎತ್ತುತ್ತಿವೆ. ಮದರಾಸಿನ ಒಟ್ಟು ಜನಸಂಖ್ಯೆಯ ಶೇ. 32ರಷ್ಟು ಮಂದಿ ಕೊಳೆಗೇರಿಗಳಲ್ಲಿವಾಸಿಸುತ್ತಿದ್ದಾರೆ. 1981ರ ಜನಗಣತಿಯ ಪ್ರಕಾರ ಮದರಾಸು ನಗರದ ಜನಸಂಖ್ಯೆ 33ಲಕ್ಷ. 1987ರ ಹೊತ್ತಿಗೆ ಅದು 70 ಲಕ್ಷವನ್ನು ಸಮೀಪಿಸಿದೆ. 1991ರ ಹೊತ್ತಿಗೆ 75 ಲಕ್ಷವನ್ನು ದಾಟುವ ನಿರೀಕ್ಷೆ ಇದೆ.

ನೀರು–ನೀರು–ನೀರು–ಇದು ಮದರಾಸಿನ ಪ್ರಮುಖ ಸಮಸ್ಯೆ. ಈಗ ಕೆಲವು ವರ್ಷಗಳ ಹಿಂದೆ ಭಾರೀ ಮಳೆಯಿಂದಾಗಿ ಮದರಾಸು ನಗರ ನಾಲ್ಕೈದು ದಿನಗಳ ಕಾಲ ನೀರಿನಲ್ಲಿ ಮುಳುಗಿತ್ತು. ಬಹಳ ವರ್ಷಗಳ ತನ್ನ ದಾಹವನ್ನು ಭೂಮಿ ತೀರಿಸಿಕೊಂಡಿತ್ತು. ಹಳ್ಳ–ಕೊಳ್ಳಗಳೆಲ್ಲ ತುಂಬಿದ್ದವು. ಆದರೆ ಮಳೆಯ ಅಬ್ಬರ ನಿಂತ ಒಂದೆರಡು ವಾರಗಳ ಬಳಿಕ ಮತ್ತೆ ಯಥಾಸ್ಥಿತಿ.ನಾಗರಿಕರಿಗೆ 2ದಿನಗಳಿಗೊಮ್ಮೆ ಮಾತ್ರ ನೀರು ಪೂರೈಸಲಾಗುವುದೆಂದು ಸರಕಾರದ ಪ್ರಕಟಣೆ. ಆ ನೀರು ಕೂಡಾ ಒಮ್ಮೊಮ್ಮೆ ನಳ್ಳಿಯಲ್ಲಿ ಮಧ್ಯರಾತ್ರಿಗೆ ಬರಲು ಆರಂಭವಾಗುವುದು. ಹೆಚ್ಚಿನ ಗೃಹಿಣಿಯರಿಗೂ ಮಧ್ಯರಾತ್ರಿಯ ನಂತರ ನಿದ್ರೆ ಇಲ್ಲ. ಬೇಕಾದಷ್ಟು ನೀರು ಪಡೆಯಲು ನಳ್ಳಿಯ ಬುಡದಲ್ಲಿ ಮೂರು ಗಂಟೆಗಳ ಕಾಲ ಹೋರಾಟ ಸಾಗಬೇಕು.

ಮದರಾಸು ನಗರದ ಒಟ್ಟು ಜನ ಸಂಖ್ಯೆಯ ಶೇ. 35ರಷ್ಟು ಮಂದಿಗೆ ವಿದ್ಯುಚ್ಛಕ್ತಿ ಇಲ್ಲ.ಶೇ.67ರಷ್ಟು ಮಂದಿಗೆ ನಳ್ಳಿ ನೀರಿಲ್ಲ. ಶೇ. 31ರಷ್ಟು ಮಂದಿಗೆ [illegible] ಮುಖ್ಯಮಂತ್ರಿಯಾಗಿದ್ದಾಗ ಜನಪ್ರಿಯ ಕಾರ್ಯಕ್ರಮಗಳನ್ನೇ ಅನುಷ್ಠಾನಗೊಳಿಸಿ ವಿರಳ ಸಂಪನ್ಮೂಲಗಳನ್ನು ಪೋಲು ಮಾಡಿ ತಮ್ಮ ಕುರ್ಚಿಯನ್ನು ಭದ್ರ ಪಡಿಸಿಕೊಂಡರೇ ಹೊರತು ನಾಗರಿಕರಿಗೆ ಮೂಲ ಸೌಕರ್ಯಗಳನ್ನು ಒದಗಿಸುವತ್ತ ಗಮನ ಹರಿಸಲಿಲ್ಲ. ಮದರಾಸು ನಗರದ ಒಟ್ಟು ಜನಸಂಖ್ಯೆಯ ಶೇ. 32ರಷ್ಟು ಮಂದಿ ಕೊಳೆಗೇರಿಗಳಲ್ಲಿ ವಾಸಿಸುತ್ತಿದ್ದಾರೆ.

ಮದರಾಸು ನಗರದ ಬೀದಿಗಳೂ ತೀರಾ ಇಕ್ಕಟ್ಟಾಗುತ್ತಾ ನಡೆದಿವೆ. ಜನ, ದನ, ಕಾರು, ಬಸ್ಸು, ಲಾರಿ, ತಣ್ಣಿ ಬಂಡಿಗಳು ಎಲ್ಲವೂ 'ಟ್ರಾಫಿಕ್ ಜ್ಯಾಂ'ನಲ್ಲಿ ತಮ್ಮ ಕಾಲನ್ನು ಸಲ್ಲಿಸುತ್ತಿವೆ. ಈ ನಗರದಲ್ಲಿ 1981ರಲ್ಲಿ 1.22 ಲಕ್ಷ ವಾಹನಗಳಿದ್ದವು. 1986ರ ಹೊತ್ತಿಗೆ ಅವುಗಳ ಸಂಖ್ಯೆ 2.30 ಲಕ್ಷಕ್ಕೇರಿತ್ತು. 1525 ಸಿಟಿ ಬಸ್ಸುಗಳು ಓಡಾಡುತ್ತಿವೆ. ಅವುಗಳಲ್ಲಿ 400 ಬಸ್ಸುಗಳ ಆಯುಷ್ಯ ಮುಗಿದಿದೆ. ಅಪರಾಧಗಳ ಸಂಖ್ಯೆಯೂ ಹಾಗೆಯೇ: 1961ರಲ್ಲಿ 5,686 ಅಪರಾಧಗಳು ದಾಖಲೆಯಾಗಿದ್ದರೆ, 1971 ರಲ್ಲಿ ಅದು 7,205ಕ್ಕೆ ಏರಿತ್ತು. 1981 ರಲ್ಲಿ 15,693 ಅಪರಾಧಗಳು ದಾಖಲಾಗಿದ್ದವು. 1986ರಲ್ಲಿ ದಾಖಲಾದ ಅಪರಾಧಗಳ ಸಂಖ್ಯೆ 20,000ಕ್ಕೂ ಅಧಿಕ.

ಎಂ.ಜಿ.ಆರ್. ಆಡಳಿತದ ಕಾಲದಲ್ಲಿ ತಮಿಳು ನಾಡಿನಲ್ಲಿ ಪತ್ರಿಕಾ ಸೆನ್ಸಾರ್‌ಶಿಪ್ ಇತ್ತು. ಸರಕಾರ ಕೊಟ್ಟ ಅಂಕೆ ಸಂಖ್ಯೆಗಳು ಮಾತ್ರ ಪ್ರಕಟವಾಗುತ್ತಿದ್ದವು. ಹಾಗಾಗಿ ಮದರಾಸಿನ ಸ್ಪಷ್ಟ ಚಿತ್ರಣ ಸರಕಾರಿ ಮೂಲಗಳಿಂದ ದೊರಕುವುದು ಬಹಳ ಕಡಿಮೆ.

ಮುಂಬಯಿ, ದಿಲ್ಲಿ ಮತ್ತು ಕಲ್ಕತ್ತಗಳಿಗೆ ಹೋಲಿಸಿದರೆ ಮದರಾಸಿನಲ್ಲಿ ಪೊಲೀಸ್ ದೌರ್ಜನ್ಯಗಳು ಹೆಚ್ಚು. ಠಾಣೆಯಲ್ಲಿ ಸಂಶಯಾಸ್ಪದ ಸಾವುಗಳು ಹೆಚ್ಚು. ಪೊಲೀಸ್ ಪಡೆಯನ್ನು ಪ್ರತಿ ಸರಕಾರ ವೆಂದೇ ಸಂಬೋಧಿಸುವವರು ಬಹು ಮಂದಿ. ಮದರಾಸು ನಗರದ ಪೊಲೀಸರಿಗೆ ಹೆಚ್ಚಾಗಿ ಭಯ ಪಡುವವರು ಸಜ್ಜನರೇ.

ಹೀಗೆ ಮಹಾನಗರಗಳು ತಮ್ಮ ಉಸಿರಾಟವನ್ನು ಆರಂಭಿಸಿವೆ. ಸೃಷ್ಟಿಕರ್ತ ಬ್ರಹ್ಮನೇ ಬಂದರೂ ಅವುಗಳನ್ನು ಜೀವದಿಂದ ಉಳಿಸಲು ಸಾಧ್ಯವಾಗಲಾರದು. ಇರುವವರಿಗೆ ಸೌಲಭ್ಯಗಳನ್ನು ಒದಗಿಸಲು ಕಷ್ಟ ಪಡುತ್ತಿರುವ ಸರಕಾರಗಳು ವಲಸೆ ಬರುವವರಿಗೆ ಸೌಲಭ್ಯಗಳನ್ನು ಒದಗಿಸುವುದಾದರೂ ಎಂತು?

ಮಹಾನಗರಗಳಿಗೆ ಮಾತ್ರ ಸೀಮಿತವಾದ ವ್ಯಾಧಿ ಇದಲ್ಲ. ಭಾರತದಲ್ಲಿರುವ ಒಟ್ಟು 3,245 ನಗರ ಮತ್ತು ಪಟ್ಟಣಗಳನ್ನು ಒಟ್ಟು ಸೇರಿಸಿ 'ನಗರ ಭಾರತ' ವೆಂದು ಕರೆಯಲಾಗುತ್ತಿದೆ.ಇವುಗಳೆಲ್ಲಕ್ಕೂ ಇಂಥದೇ ಸಮಸ್ಯೆಗಳಿವೆ. ದೇಶದ ಪಟ್ಟಣಗಳು ಸರಾಸರಿ ಶೇ. 40ರ ಗತಿಯಲ್ಲಿ ಬೆಳೆಯುತ್ತವೆನ್ನುವುದು ಸರಕಾರದ ಲೆಕ್ಕಾಚಾರ. ಆದರೆ 235 ಪಟ್ಟಣಗಳು ಈ ಗತಿಯನ್ನೂ ಮೀರಿ ಬೆಳೆಯುತ್ತಿವೆ.

ಮುಂಬಯಿ, ಕಲ್ಕತ್ತ, ಮದರಾಸು ಮತ್ತು ದಿಲ್ಲಿಗಳಿಗೆ ಸರಿ ಸಮನಾಗಿ ಬೆಂಗಳೂರು, ಅಹ್ಮದಾಬಾದ್, ಪಾಟ್ನಾ ಮುಂತಾದ ನಗರಗಳೂ ಬೆಳೆಯತೊಡಗಿವೆ. ಒಂದು ದಶಕದೊಳಗೇ ಇವು ಮಹಾ ನಗರಗಳಾಗಿ ಬಿಡುತ್ತವೆ.

ಅತ್ಯಂತ ಶೀಘ್ರವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಬೆಂಗಳೂರು ಒಂದು. 1981ರ ಜನಗಣತಿಯ ಪ್ರಕಾರ ಈ ನಗರದ ಜನ ಸಂಖ್ಯೆ 49 ಲಕ್ಷ ಆದರೆ ಬೆಂಗಳೂರು ವರ್ಷಕ್ಕೆ ಶೇ. 4.7ರ ಗತಿಯಲ್ಲಿ ಬೆಳೆಯುತ್ತಲೇ ಇದೆ. ಈ ಅಂದಾಜಿನಂತೆ 1987ರ ಅಂತ್ಯಕ್ಕೆ ಬೆಂಗಳೂರಿನ ಜನ ಸಂಖ್ಯೆ 70 ಲಕ್ಷ ದಾಟಿತ್ತು. ಈ ನಗರದ ಜನ ಸಂಖ್ಯೆಯ ಶೇ. 28ರಷ್ಟು ಮಂದಿಗೆ ವಿದ್ಯುಚ್ಛಕ್ತಿ ದೊರೆತಿಲ್ಲ. ಶೇ. 57ರಷ್ಟು ಮಂದಿಗೆ ನಳ್ಳಿ ನೀರಿಲ್ಲ. ಶೇ. 44ರಷ್ಟು ಮಂದಿಗೆ ಶೌಚಾಲಯಗಳಿಲ್ಲ. ಕೊನೆಯದರ ಅಭಾವ ಇಡೀ ದೇಶದಲ್ಲಿ ತೀವ್ರವಾ [illegible] ಗಳನ್ನೆಲ್ಲ ಪ್ರಕೃತಿ ಬಾಧೆಯನ್ನು ತೀರಿಸುವ ಜನರನ್ನು ಕಾಣಬಹುದು. ದೇಶದ ಯಾವ ಮೂಲೆಯ ಯಾವ ರಸ್ತೆಗೆ ಹೋದರೂ ಮೂಗಿಗೆ ಘಮ್ಮೆಂದು ಬಡಿಯುವ ಮೂತ್ರದ ವಾಸನೆಯಿಂದಲೇ ನಾವು ಭಾರತದಲ್ಲೇ ಇದ್ದೇವೆ ಎಂಬುದನ್ನು ಗುರುತಿಸಬಹುದು. ಮೂತ್ರ ವಿಸರ್ಜನೆಯ ಏಕರೂಪತೆಯಲ್ಲೇ ಭಾರತದ ಏಕತೆ ಮತ್ತು ಸಮಗ್ರತೆಗಳು ಅಭಿವ್ಯಕ್ತಿಗೊಳ್ಳುತ್ತವೆ.

ಬೆಂಗಳೂರಿನ ವಾಹನ ವ್ಯವಸ್ಥೆ ಇನ್ನೂ ಅಧ್ವಾನ. 1981ರಲ್ಲಿ ಬೆಂಗಳೂರಿನ ರಸ್ತೆಯ ಮೇಲೆ 1.22 ಲಕ್ಷ ವಾಹನಗಳಿದ್ದರೆ 1986ರ ಹೊತ್ತಿಗೆ ಈ ಸಂಖ್ಯೆ 2.30 ಲಕ್ಷಕ್ಕೆ ಏರಿತ್ತು. 1986 ರಲ್ಲಿ ನಗರದಲ್ಲಿ ಒಟ್ಟು 1,289ಸಿಟಿ ಬಸ್‌ಗಳು ಓಡಾಡುತ್ತಿದ್ದವು. ಅವುಗಳಲ್ಲಿ 306 ಬಸ್ಸುಗಳ ಆಯುಷ್ಯ ಎಂದೋ ಮುಗಿದಿತ್ತು. ಬಿ.ಟಿ.ಎಸ್. ಎಂದು ಹೆಸರು ಹೊತ್ತಿರುವ ಬೆಂಗಳೂರು ನಗರ ಸಾರಿಗೆ ವ್ಯವಸ್ಥೆ ಎಷ್ಟು ಅಧ್ವಾನವಾಗಿದೆ ಎಂದರೆ ಪ್ರಯಾಣಿಕರು ಅದನ್ನು "ಬೆಂಗಳೂರು ಟಾರ್ಚರ್ ಸರ್ವಿಸ್"–ಬೆಂಗಳೂರು ಕಿರುಕುಳ ಸೇವೆ"–ಎಂದೇ ಪ್ರೀತಿಯಿಂದ ಕರೆಯುತ್ತಾರೆ.

ಇಲ್ಲಿನ ನಾಗರಿಕರಿಗೆ ಎರಡು ದಿನಗಳಿಗೊಮ್ಮೆ, ಕೆಲವು ಬೀದಿಗಳಲ್ಲಿ ವಾರಕ್ಕೆರಡು ಬಾರಿ ನೀರು ಒದಗಿಸಲಾಗುತ್ತಿದೆ. ಯಾವ ಸಾಧು, ಸನ್ಯಾಸಿಗಳು ಜಪ ಮಾಡಿದರೂ ತಿಪ್ಪಗೊಂಡನ ಹಳ್ಳಿ ಜಲಾಶಯ ಪೂರ್ಣ ತುಂಬುವುದೇ ಇಲ್ಲ.ಮಳೆ ಸುರಿದ ತಕ್ಷಣ ಕಾವೇರಿ ಪೂಜೆ ನಡೆಸುತ್ತದೆ ಸರಕಾರ ಪೂಜೆ ಮುಗಿದ ಮರುದಿನ ನೀರು ಕಣ್ಮರೆಯಾಗುತ್ತದೆ.

ಬೆಂಗಳೂರಿನಲ್ಲಿ ಅಪರಾಧಸಂಖ್ಯೆಯೂ ಅಧಿಕ.ಹಾಡು ಹಗಲಿನಲ್ಲಿ ದಿನಕ್ಕೊಂದೂ, ಎರಡೋ, ಮಾನ ಭಂಗ, ಅತ್ಯಾಚಾರ ಪ್ರಕರಣಗಳು ನಡೆಯುತ್ತಿರುವುದು ಇಲ್ಲೇ. ಲೂಟಿ ಮತ್ತು ದರೋಡೆ ಮಾಮೂಲು 'ಅಜೆಂಡಾ' ಪೊಲೀಸರು ಬೆನ್ನು ಹಾಕಿದ ತಕ್ಷಣ ಇಲ್ಲಿ ಅಪರಾಧಗಳು ನಡೆಯುತ್ತವೆ. ಅಪರಾಧ ನಡೆದ ತಕ್ಷಣ ಪೊಲೀಸರು ಹಾಜರಾಗುತ್ತಾರೆ. ಇದು ಬೆಂಗಳೂರಿನ ಅಪರಾಧ ಚಕ್ರ. ಇಲ್ಲಿ 1961 ರಲ್ಲಿ 4,317, 1971ರಲ್ಲಿ 8,961 ಮತ್ತು 1981ರಲ್ಲಿ 17,122 ಅಪರಾಧಗಳು ದಾಖಲಾಗಿವೆ, 1987ರ ಅಂತ್ಯದಲ್ಲಿ ಈ ಸಂಖ್ಯೆ 22,000ವನ್ನೂ ದಾಟಿದೆ. ಮಹಾ ನಗರದತ್ತ ಧಾವಿಸುತ್ತಿರುವ ಬೆಂಗಳೂರು ಈಗಾಗಲೇ ಮಹಾ ನಗರದ ಲಕ್ಷಣಗಳನ್ನೆಲ್ಲ ಹೊಂದಿದೆ. ಇಲ್ಲಿ ಕಟ್ಟುತ್ತಿರುವಂತೆಯೇ ಕುಸಿಯುವ ಕಟ್ಟಡಗಳೂ ಇವೆ. ಕುಸಿಯುವ ಬಹು ಮಹಡಿ ಕಟ್ಟಡಗಳೂ ಇವೆ.

ಭಾರತದ ಮಹಾನಗರಗಳ ಕಥೆ ಬೆಚ್ಚಿ ಬೀಳಿಸುವಂತಹದ್ದು. ಯೋಚಿಸುತ್ತಾ ಹೋದಂತೆ ನಿದ್ದೆ ಕೆಡಿಸುವಂಥದ್ದು. ಇದಕ್ಕೆ ಪರಿಹಾರ ಎಲ್ಲಿದೆ? ಪರಿಹಾರ ಏನು? ನಗರಗಳು ಉಬ್ಬಿ,ಅಜೀರ್ಣದಿಂದ ಸ್ಫೋಟಗೊಂಡರೆ ಮುಂದೇನು?

"ಈಗ ಈ ಮಹಾ ನಗರಗಳಲ್ಲಿ ಯಾವ ನಾಗರಿಕನೂ ಬೇಸರ ಕಳೆಯಲು ವಾಕಿಂಗ್ ಹೋಗುವುದಿಲ್ಲ. ಯಾಕೆಂದರೆ ವಾಕಿಂಗ್ ಹೋಗುವುದರಿಂದ ಬೇಸರ, ಉದ್ವೇಗ ಕಡಿಮೆಯಾಗುವ ಬದಲು ಹೆಚ್ಚಾಗುತ್ತದೆ. ವಾಕಿಂಗ್ ಹೋಗುವಂಥ ಖಾಲಿ ಸ್ಥಳಗಳೂ ಇಲ್ಲ, ನಗರಗಳು ಕಾಂಕ್ರೀಟ್ ಕಾಡುಗಳಾಗಿವೆ, ಅದರ ಜೊತೆಗೇ ಸುತ್ತಮುತ್ತಲಿಂದ ಹೊಗೆ, ಧೂಳು ಮುತ್ತಿಕೊಳ್ಳುತ್ತದೆ. ಇದೊಂದು ಅಧ್ವಾನಪುರ" ಇದು ಬೆಂಗಳೂರಿನ ನಾಗರಿಕರೊಬ್ಬರ ಅಭಿಪ್ರಾಯ.

ವಿಜ್ಞಾನ ಮತ್ತು ತಂತ್ರಜ್ಞಾನಗಳ ಹೆಸರಿನಲ್ಲಿ ನಾವೆತ್ತ ಹೋಗುತ್ತಿದ್ದೇವೆ? ಮುಂದುವರಿಯುತ್ತಿರುವ ಮಹಾ ನಗರಗಳ ಮೂಲಕ ನಮಗೆ 21ನೇ ಶತಮಾನ ಪ್ರವೇಶ ಸಾಧ್ಯವೆ? ಹೊಸ ತರ ನಿರ್ಮಾಣಕ್ಕೆ ಹಳೆಯದರ ನಿರ್ನಾಮ ಅಗತ್ಯವೆ? ಉತ್ತರ ಎಲ್ಲಿದೆ?

(ವಿವಿಧ ಮೂಲಗಳಿಂದ)

ಈ ತಲೆಬರಹವನ್ನೋದಿ ಅಚ್ಚರಿ ಯಾಯಿತೇ? ಈ ಲೇಖನ ಓದುವಷ್ಟರಲ್ಲಿ ವಿಂಡೀಸ್ ಪ್ರವಾಸ ಕೈಗೊಳ್ಳುವ ಭಾರತ ಕ್ರಿಕೆಟ್ ತಂಡದ ಆಟಗಾರರ ಹೆಸರುಗಳು ನಿಮಗೆ ತಿಳಿದಿರುವುದರಿಂದ ಅದರಲ್ಲಿ ಮೊಹಿಂದರ್ ಅಮರನಾಥರ ಹೆಸರು ಸೇರಿಲ್ಲ ಎಂದು ತಲೆ ಕೆರೆದುಕೊಳ್ಳುತ್ತಿರುವಿರಾ?

ನಿಮ್ಮ ಊಹೆ ನಿಜ. ತಂಡದಲ್ಲಿ ಮೊಹಿಂದರ್ ಸೇರ್ಪಡೆಗೊಂಡಿಲ್ಲ. ಮತ್ತೆ ಹೇಗೆ ವಿಂಡೀಸ್‌ಗೆ ಹೋಗುತ್ತಾರೆ ಎನ್ನುತ್ತೀರಾ? ಮೇಲಿನವರ 'ಕೃ'ಪಾದಿಂದ ಅವರು ಕೊನೆ ಕ್ಷಣದಲ್ಲಿ ತಂಡಕ್ಕೆ ಸೇರ್ಪಡೆಗೊಳ್ಳುವ ಲಕ್ಷಣಗಳೇನೂ ಈಗ ಕಾಣುತ್ತಿಲ್ಲ. ಮತ್ತೆ ಹೇಗೆ?



ಅಮರನಾಥ್ ವಿಂಡೀಸ್‌ಗೆ!

ಮೊಹಿಂದರ್ ಈ ಬಾರಿ ಆಟಗಾರನಾಗಿ ಅಲ್ಲ. ಆಟಗಾರರ ವಿಮರ್ಶಕನಾಗಿ ವಿಂಡೀಸ್ ಪ್ರವಾಸ ಕೈಗೊಳ್ಳಲಿದ್ದಾರೆ. ಅಂದರೆ ಅವರು ಈ ಬಾರಿ ಬ್ಯಾಟ್ ಮತ್ತು ಚೆಂಡುಗಳೊಂದಿಗೆ ಮೈದಾನದಲ್ಲಿ ತನ್ನ ಪ್ರತಿಭೆ ತೋರುವುದಿಲ್ಲ. ಅದರ ಬದಲು ಪೆನ್ನು ಮತ್ತು ಮೈಕ್ರೋಫೋನ್ ಹಿಡಿದು ತನ್ನ (ಮಾಜಿ!) ಸಹೋದ್ಯೋಗಿಗಳು ಮೈದಾನದಲ್ಲಿ ವಿಂಡೀಸ್‌ನ ಭಯಾನಕ ವೇಗದ ಬೌಲಿಂಗನ್ನು ಎದುರಿಸಲು ಪಡುವ ಪರಿಪಾಟಲನ್ನು ಸುಸಜ್ಜಿತ ಪ್ರೆಸ್ ಬಾಕ್ಸ್‌ನಷ್ಟೆ ಆರಾಮವಾಗಿ ಕುಳಿತು ಭಾರತೀಯರಿಗೆ ವರ್ಣಿಸಲಿದ್ದಾರೆ.

ಕಪಿಲ್‌ದೇವ್ ಅವರ ವೀಡಿಯೊ ಸಿಂಡಿಕೇಟ್ ವಿಜನ್ನಿಯಾ 'ದೇವ್ ಫೀಚರ್ಸ್'ನ ಅಂಕಣಕಾರರಾಗಿ ಹಾಗೂ ಅವರು ತಯಾರಿಸುವ ಸರಣಿಯ ಎಲ್ಲಾ ಟೆಸ್ಟ್ ಮತ್ತು ಒಂದು ದಿನದ ಪಂದ್ಯಗಳ ವೀಡಿಯೊದಲ್ಲಿ ಮೊಹಿಂದರ್ ಒಬ್ಬ ತಜ್ಞ ವೀಕ್ಷಕ ವಿವರಣೆಕಾರನಾಗಿ ಕಾರ್ಯ ನಿರ್ವಹಿಸಲು ನಿಯುಕ್ತಗೊಂಡಿದ್ದಾರೆ.

ಅಂಕಣಕಾರನಾಗಿ ಮೊಹಿಂದರ್, ಪ್ರತೀದಿನದ ಆಟದ ಕುರಿತಂತೆ ಭಾರತದ ಪತ್ರಿಕೆಗಳಲ್ಲಿ ಅಂಕಣ ಬರೆಯಲಿರುವರು ಅಲ್ಲದೇ ವಿಂಡೀಸ್‌ನ ಮಹಾನ್ ಕ್ರಿಕೆಟಿಗರಾಗಿದ್ದ ಗ್ಯಾರಿ ಸೋಬರ್ಸ್, ರೋಹನ್ ಕನ್ಹಾಯ್ ಹಾಗೂ ಇಂಗ್ಲೆಂಡ್‌ನ ಟೋನಿ ಲೂಯಿಸ್‌ರೊಂದಿಗೆ ಪಂದ್ಯಗಳ ವೀಕ್ಷಕ ವಿವರಣೆಕಾರರಾಗಿರುವರು.

ವಿಂಡೀಸ್‌ನಲ್ಲಿ ಭಾರತ ಆಡುವ ನಾಲ್ಕು ಟೆಸ್ಟ್ ಹಾಗೂ ಐದು ಒಂದು ದಿನದ ಪಂದ್ಯಗಳ ಹೈಲೈಟ್‌ಗಳನ್ನೂ ದೇವ್ ಫೀಚರ್ಸ್ ದೂರದರ್ಶನದಲ್ಲಿ ನೀಡಲಿದೆ. ಸೆಟ್‌ಲೈಟ್ ಸಹಾಯದಿಂದ ಆಟ ಮುಗಿದ ಮರುದಿನ ಸಂಜೆಯೇ ಅದನ್ನು ಭಾರತದಲ್ಲಿ ಕ್ರೀಡಾ ಪ್ರೇಮಿಗಳು ವೀಕ್ಷಿಸಬಹುದು. ವಿಂಡೀಸ್‌ನಲ್ಲಿ ಭಾರತ ಆಡುವ ಪಂದ್ಯಗಳನ್ನು ಇಲ್ಲಿ ತೋರಿಸಲಿರುವುದು ಇದು ಮೊದಲ ಸಲವಾಗಿದೆ.

ಮೊಹಿಂದರ್ ಭಾರತ ತಂಡದ ಸದಸ್ಯನಾಗಿ ವಿಂಡೀಸ್‌ಗೆ ತೆರಳಬೇಕಾಗಿತ್ತು. ಆದರೆ ರಾಷ್ಟ್ರೀಯ ಆಯ್ಕೆಗಾರರೊಂದಿಗೆ ನಡೆದ ಕುಸ್ತಿಯಲ್ಲಿ ಆಯ್ಕೆಗಾರರು ಮೇಲುಗೈ ಸಾಧಿಸುವುದರೊಂದಿಗೆ ಜಿಮ್ಮಿಯವರಿಗೆ ತಂಡದಲ್ಲಿ ಸ್ಥಾನ ನಿರಾಕರಿಸಲಾಗಿತ್ತು. ಇದರಿಂದ ಭಾರತದ ಕ್ರೀಡಾ ಪ್ರೇಮಿಗಳ ಹಾಗೂ ಪತ್ರಕರ್ತರ ಸಹಾನುಭೂತಿಪಡೆದಿರುವ ಮೊಹಿಂದರ್‌ಗೆ ಈ ಬೆಳವಣಿಗೆ ಖುಷಿ ತಂದಿರಬಹುದು.

ಏಕೆಂದರೆ ವಿಂಡೀಸ್ ವೇಗದ ಬೌಲಿಂಗ್ ಪಡೆಯನ್ನು ಅವರದೇ ನೆಲದಲ್ಲಿ ಎದುರಿಸುವವನಿಗೆ ಎಂಟೆದೆ ಇರಬೇಕಾಗುತ್ತದೆ. 1983ರ ಪ್ರವಾಸದಲ್ಲಿ ಅಮರ್‌ನಾಥ್‌ಗೆ ಇದರ ಅನುಭವ ಚೆನ್ನಾಗಿಯೇ ಆಗಿದೆ. ಅಂದು ಅವರು ಈ ಪರೀಕ್ಷೆಯಲ್ಲಿ ಯಶಸ್ವಿಯಾಗಿ ಇಡೀ ವಿಶ್ವದ ಪ್ರಶಂಸೆ ಪಡೆದಿದ್ದರು. ವಿಶ್ವದಲ್ಲಿ ವೇಗದ ಬೌಲಿಂಗ್ ದಾಳಿಯನ್ನು ದಿಟ್ಟವಾಗಿ, ಆತ್ಮ ವಿಶ್ವಾಸದಿಂದ ಎದುರಿಸಬಲ್ಲ ಬ್ಯಾಟ್ಸ್‌ಮನ್ ಎಂದು ಎಲ್ಲರಿಂದಲೂ ಹೊಗಳಿಸಿ ಕೊಂಡಿದ್ದರು.

ಮಾಲ್ಕಂ ಮಾರ್ಷಲ್, ಕರ್ಟ್ಲಿ ಆಂಬ್ರೋಸ್, ಪ್ಯಾಟ್ರಿಕ್ ಪ್ಯಾಟರ್‌ಸನ್, ಕರ್ಟನಿ ವಾಲ್ಶ್ ಹಾಗೂ ಇಯಾನ್ ಬಿಷಪ್‌ರನ್ನು ಒಬ್ಬರ ಹಿಂದ ಒಬ್ಬರಂತೆ ಎದುರಿಸಿ ಅವರಿಂದ ಗಂಟೆಗೆ ಸುಮಾರು 100 ಕಿ. ಮಿ. ವೇಗದಲ್ಲಿ ಬರುವ ಚಾಲಿನಿಂದ ಮೈಕೈಗಳನ್ನು ಜಜ್ಜಿಸಿಕೊಳ್ಳುವುದಕ್ಕಿಂತ, ಪ್ರೆಸ್ ಬಾಕ್ಸ್‌ನಲ್ಲಿ ಕುಳಿತು ಮಾರ್ಷಲ್‌ರ ದೃಷ್ಟಿಯಲ್ಲಿ ಅವರ ಕಡು ವೈರಿಯಾದ ವೆಂಗ್‌ಸರ್ಕಾರ್ ಮತ್ತು ಅವರ ಬಳಗ, ಮೈದಾನದಲ್ಲಿ ಹೋರಾಡುವುದನ್ನು ವರದಿ ಮಾಡುವುದೇ ಮೊಹಿಂದರ್‌ಗೆ ಸ್ವತಃ ಆಡುವುದಕ್ಕಿಂತ ಹೆಚ್ಚು ಖುಷಿ ಕೊಡಬಹುದು.

ಟೆಸ್ಟ್‌ನಲ್ಲಿ ಮೊಹಿಂದರ್ ಕೊನೆಯ ಇನಿಂಗ್ಸ್ ಆಡಿರುವಂತೆ ಕಂಡುಬರುತ್ತಿದೆ. ಆದರೆ 38ರ ಹರೆಯದಲ್ಲಿದ್ದರೂ ತಂಡದ ಹಲವು ಆಟಗಾರರಿಗಿಂತ ಹೆಚ್ಚು ಸದೃಢವಾಗಿ ಲವಲವಿಕೆಯಿಂದ ಪುಟಿಯುತ್ತಿರುವ ಮೊಹಿಂದರ್ ಮತ್ತೊಮ್ಮೆ ಭಾರತ ಪರ ಆಡಿದರೂ ಅಚ್ಚರಿಯಿಲ್ಲ ಏಕೆಂದರೆ ದವರ ಹಿಂದೆಇಂಥ ಪರಂಪರೆಯೇ ಇದೆ. 1969 ರಿಂದಮೊಹಿಂದರ್ ತಂಡಕ್ಕೆ ಮತ್ತೆ ಮತ್ತೆ ಮರಳಿದಂತೆ ಬೇರೆ ಯಾರೂ ಸೇರ್ಪಡೆಗೊಂಡಿಲ್ಲ. ಅವರನ್ನು ಈಗಾಗಲೇ ದಿಲ್ಲಿ ರಣಜಿ ತಂಡಕ್ಕೆ ಮತ್ತೆ ಸೇರಿಸಿಕೊಳ್ಳಲಾಗಿದೆ.

ಮಂಡಳಿಯಿಂದ ಮಗನಂತೆಯೇ ಕಹಿ ಅನುಭವ ಪಡೆದ ಲಾಲಾ ಅಮರನಾಥ್ ನಂತರ ವೀಕ್ಷಕವಿವರಣಾಕಾರರಾಗಿ ಜನಪ್ರಿಯರಾದಂತೆ ಮೊಹಿಂದರ್ ಕೂಡಾ ಯಶಸ್ವಿಯಾದಾರೆ?ಕಾದು ನೋಡಬೇಕು.



ವೆಂಗ್ ಸರ್ಕಾರ್

ಭಾರತ ಕ್ರಿಕೆಟ್ ತಂಡದ ನಾಯಕ ದಿಲೀಪ್ ವೆಂಗ್‌ಸರ್ಕಾರ್ ರಾಜಕೀಯಕ್ಕೆ ಪ್ರವೇಶಿಸಲಿದ್ದಾರೆಯೇ? ಮುಂಬಯಿ ಪತ್ರಿಕೆಯೊಂದರ ವರದಿಯಂತೆ ವೆಂಗ್‌ಸರ್ಕಾರ್ ಕಾಂಗ್ರೆಸ್ (ಐ) ಪಕ್ಷ ಸೇರಲಿದ್ದಾರೆ.

ವೆಂಗ್‌ಸರ್ಕಾರ್ ಅವರನ್ನು ಮಹಾರಾಷ್ಟ್ರ ಪ್ರದೇಶ ಯುವ ಕಾಂಗ್ರೆಸ್ ಸಮಿತಿಗೆ ವಿಶೇಷ ಆಹ್ವಾನಿತರಾಗಿ ನೇಮಿಸಲಾಗಿದೆ ಎಂದು ಈ ವರದಿ ತಿಳಿಸುತ್ತದೆ.

ವೆಂಗ್‌ಸರ್ಕಾರ್ ಅವರ ಕುಟುಂಬದ ಮೂಲಗಳು ಇದನ್ನು ನಿರಾಕರಿಸಿದ್ದರೂ ಸಂಶಯ ಹಾಗೆ ಉಳಿದಿದೆ. ಬೆಂಕಿ ಇಲ್ಲದೇ ಹೊಗೆ ಏಳದು ಎನ್ನುವ ಹಾಗೆ. ವಿಂಡೀಸ್‌ನಲ್ಲಿ ವೆಂಗ್‌ಸರ್ಕಾರ್ 'ನಾಯಕತ್ವ' ಅಗ್ನಿ ಪರೀಕ್ಷೆಗೊಳಗಾಗಲಿದ್ದು ಮುಂಜಾಗ್ರತೆಯಾಗಿ ಅವರು ಈ ನಿರ್ಧಾರ ತೆಗೆದುಕೊಂಡಿದ್ದಾರೆ ಎನ್ನುವುದು ಅಷ್ಟು ಕುಹಕವೇನಲ್ಲ.

ಅದೇ ರೀತಿ ಭಾರತದ ಮಾಜಿ ನಾಯಕ ಸುನಿಲ್ ಗಾವಸ್ಕರ್ ಅವರನ್ನು ರಾಜ್ಯಸಭೆಗೆ ನಾಮಕರಣ ಮಾಡಲಾಗುವುದು ಎನ್ನುವ ಊಹಾಪೋಹವೂ ಬಲವಾಗಿ ಕೇಳಿಬರುತ್ತಿದೆ. 'ಇದನ್ನು ನಾನು ಕಳೆದ ಹತ್ತು ವರ್ಷಗಳಿಂದ ಕೇಳುತ್ತಾ ಬಂದಿದ್ದೇನೆ' ಎಂದು ನಗೆಯಾಡುವ ಗಾವಸ್ಕರ್ ಸಂಪಾದಕತ್ವದ 'ಸ್ಪೋರ್ಟ್ಸ್ ವೀಕ್' ಸಾಪ್ತಾಹಿಕ ಇತ್ತೀಚೆಗೆ ತನ್ನ ಪ್ರಕಟಣೆ ನಿಲ್ಲಿಸಿದೆ.

ಕ್ರೀಡಾಲೋಕದ ಸುತ್ತ ಮುತ್ತ

ಬಿ. ಬಿ. ಶೆಟ್ಟಿಗಾರ್

ಭಾರತದಲ್ಲಿ ಕ್ರೀಡೆಗೆ ಸಂಬಂಧಪಟ್ಟವರೆಲ್ಲ ಒಂದಲ್ಲ ಒಂದು ವಿಧದಲ್ಲಿ ದೂರದರ್ಶನಕ್ಕೆ ದಾಳಿ ಇಡುತ್ತಿದ್ದಾರೆ. ಟಿವಿಯಲ್ಲಿ ಕಾಣಿಸಿಕೊಳ್ಳುವ ಮೂಲಕ ಜನರೊಂದಿಗೆ ಬೇಗನೆ, ಹೆಚ್ಚು ಗಾಢವಾಗಿ ಸ್ಪಂದಿಸಬಹುದು ಎಂಬುದನ್ನು ಅರಿತ ಕ್ರೀಡಾರಂಗದವರು ಈಗ ಹೆಚ್ಚು ಹೆಚ್ಚು ತಮ್ಮ ಮುಖಗಳನ್ನು ಟಿವಿಯಲ್ಲಿ ತೋರುತ್ತಿದ್ದಾರೆ.

ಟಿವಿಯಲ್ಲಿ ಕ್ರೀಡಾ ಕಾರ್ಯಕ್ರಮಗಳಿಗೆ ಬರಗಾಲವಿರುವುದರಿಂದ ಹಾಗೂ ಉತ್ತಮ ಮನೋರಂಜನೆಯ ಕಾರ್ಯಕ್ರಮಗಳು ಮರೀಚಿಕೆಯಂತಾಗಿರುವುದರಿಂದ ಕ್ರೀಡಾ ಕಾರ್ಯಕ್ರಮಗಳೆಲ್ಲ ಜನಪ್ರಿಯಗೊಳ್ಳುತ್ತಿವೆ.

ಟಿವಿ ಮೂಲಕ ಮೊದಲು ಜನರ ಹೃದಯಕ್ಕೆ ಲಗ್ಗೆ ಹಾಕಿದವರು ಸುನಿಲ್ ಗಾವಸ್ಕರ್ ತಮ್ಮ 'ಗಾವಸ್ಕರ್ ಪ್ರೆಸೆಂಟ್ಸ್' ಮೂಲಕ. ಸಣ್ಣಪುಟ್ಟ ಲೋಪದೋಷಗಳನ್ನು ಬಿಟ್ಟರೆ ತಾಂತ್ರಿಕವಾಗಿ ಮೇಲ್ಮಟ್ಟದಲ್ಲಿತ್ತು. ಗಾವಸ್ಕರ್ ಎಂದಿನಲವಲವಿಕೆಯ ನಿರೂಪಣೆಯಿಂದ ಟೆಸ್ಟ್ ಮತ್ತು ಒಂದು ದಿನದ ಪಂದ್ಯಗಳ ಚಿರಸ್ಮರಣೀಯ ಹಾಗೂ ರೋಮಾಂಚಕಾರಿ ಕ್ಷಣಗಳನ್ನು ಮನರಂಜನೀಯವಾಗಿಸಿದ್ದರು.

ಮುಂದಿನ ಸರದಿ ರವಿಶಾಸ್ತ್ರಿಯವರದು. ಕ್ರಿಕೆಟ್‌ನ ಪ್ರಾಥಮಿಕ ಪಾಠಗಳನ್ನು ತಿಳಿಸಿದ ಈ ಕಾರ್ಯಕ್ರಮ ಕೂಡಾ ಸಾಕಷ್ಟು ಜನಪ್ರಿಯವಾಗಿತ್ತು. ಕಳೆದ ತಿಂಗಳು ಭಾರತದ ಮಾಜಿ ಫುಟ್ಬಾಲ್ ಕೋಚ್ ಪಿ.ಕೆ. ಬ್ಯಾನರ್ಜಿ, ವಿಶ್ವದ ಸೂಪರ್ ಸ್ಟಾರ್ ಫುಟ್ಬಾಲಿಗರ ಬಗ್ಗೆ ನಾಲ್ಕು ಕಂತುಗಳಲ್ಲಿ ಪ್ರಸ್ತುತ ಪಡಿಸಿದ ಫುಟ್ಬಾಲ್ ಕುರಿತ ಕಾರ್ಯಕ್ರಮ ಅತ್ಯಂತ ಆಕರ್ಷಕವಾಗಿತ್ತು.

ಭಾರತದ ಡ್ಯಾಶಿಂಗ್ ಹೀರೊ ಕೆ. ಶ್ರೀಕಾಂತ್, ಕೂಡಾ ಇದರಲ್ಲಿ ಹಿಂದೆ ಬಿದ್ದಿಲ್ಲ. ಕ್ರಿಕೆಟ್ ಕುರಿತು ಅವರು ತಮಿಳಿನಲ್ಲಿ ಪ್ರಸ್ತುತ ಪಡಿಸಿದ ಕಾರ್ಯಕ್ರಮ ಮದರಾಸಿನಿಂದ ಪ್ರಸಾರಗೊಂಡಿತ್ತು. ಆದರೆ ಅದರಲ್ಲಿ ಶ್ರೀಕಾಂತರ ಆಟದ ಮಿಂಚಿನ ಸೆಳಹುವಾಗಲಿ, ಸರಳವಾಗಿ ಸಾಗುವ ಹಾಸ್ಯವಾಗಲಿ ಉಸಿರು ಬಿಗಿ ಹಿಡಿಸುವ ವೈಖರಿಯಾಗಲಿ, ಕಾಣಿಸಲಿಲ್ಲ ವೆಂಬುದು ನೋಡಿದವರ ಅಂಬೋಣ.

ತೀರಾ ಇತ್ತೀಚೆಗೆ ಟಿವಿ ಪರದೆಗೆ ಲಗ್ಗೆ ಹಾಕಿದವರು ಎಂ.ಎ.ಕೆ. ಪಟೌಡಿ. ಟೈಗರ್ ನಿರ್ದೇಶಕರಾಗಿರುವ ಪೋಲೊ ಇನ್ ಇಂಡಿಯಾ ಕಳೆದ ಭಾನುವಾರ ರಾತ್ರಿಯಿಂದ ಪ್ರಸಾರಗೊಳ್ಳುತ್ತಿದೆ ಈ ಕಾರ್ಯಕ್ರಮ ಎಷ್ಟೇ ಮೇಲ್ಮಟ್ಟದಲ್ಲಿದ್ದರೂ ಜನಸಾಮಾನ್ಯರನ್ನು ತಲುಪುವುದು ಕಷ್ಟ. ಏಕೆಂದರೆ ಪೋಲೊ ಶ್ರೀಮಂತರ ಕ್ರೀಡೆ. ಜನಸಾಮಾನ್ಯರು ಇದನ್ನು ನೋಡುವುದನ್ನು ಬಿಡಿ ಕೇಳಿಯೂ ಇರುವುದಿಲ್ಲ. ಆದ್ದರಿಂದ ಇದು ಒಂದು ವರ್ಗಕ್ಕೆಮಾತ್ರ ಹಿಡಿಸಬಹುದು.

ಇನ್ನು ಸದ್ಯವೇ ಕಿರುತೆರೆಯಲ್ಲಿ ಮೂಡುವ ಮತ್ತೊಂದು ಕ್ರೀಡಾ ಕಾರ್ಯಕ್ರಮ ಪ್ರಕಾಶ್ ಪಡುಕೋಣೆಯವರು ಪ್ರಸ್ತುತಪಡಿಸುವ ಬ್ಯಾಡ್ಮಿಂಟನ್. ಭಾರತ ಸರ್ವಶ್ರೇಷ್ಠ ಬ್ಯಾಡ್ಮಿಂಟನ್ ಆಟಗಾರನೆನಿಸಿ ಇತ್ತೀಚೆಗಷ್ಟೇ ನಿವೃತ್ತರಾದ ಪಡುಕೋಣೆ,ಪ್ರೇಕ್ಷಕರಿಗೆ ಶಟಲ್‌ಬ್ಯಾಡ್ಮಿಂಟನ್ ಆಡುವ ಬಗ್ಗೆ ವಿವರ ತಿಳಿಸುವುದಲ್ಲದೇ ವಿಶ್ವದ ಮಹಾನ್ ಆಟಗಾರರಾದ ಲೀ ಸ್ವಿ ಕಿಂಗ್, ಸುಗಿಯಾರ್ತೊ, ಜಾನ್ ಜಿಯಾನ್ ಮುಂತಾದವರ ಆಟದ ವೀಡಿಯೋ ಟೇಪಿಂಗ್ ಕೂಡಾ ತೋರಿಸುವರು. ಅಲ್ಲದೇ ಕೆಲವು ಪ್ರಮುಖ ಆಟಗಾರರೊಂದಿಗೆ ಸಂದರ್ಶನವೂ ಇದರಲ್ಲಿದೆ.

ಮುಂದೆ ಮೊಹಿಂದರ್ ಅಮರ್‌ನಾಥ್ ಸೇರಿದಂತೆ ಇನ್ನೂ ಹಲವರು ಟಿವಿಗೆ ಲಗ್ಗೆ ಹಾಕಲು ಕಾದಿದ್ದಾರೆ.

ಬೋರ್ಗ್ ಮತ್ತೆ ಸುದ್ದಿಗೆ

ಬೋರ್ನ್ ಬೋರ್ಗ್ ಕಳೆದ ವಾರ ಮತ್ತೊಮ್ಮೆ ಸುದ್ದಿಗೆ ಬಂದರು. ಆದರೆ ಈ ಬಾರಿ ಕೋರ್ಟ್‌ನಲ್ಲಿ ತನ್ನ ಸಾಧನೆಯಿಂದಲ್ಲ. ಆತ್ಮಹತ್ಯೆಗೆ ವಿಫಲ ಪ್ರಯತ್ನ ನಡೆಸಿ ಆಸ್ಪತ್ರೆಗೆ ಸೇರುವ ಮೂಲಕ.

ವಿಶ್ವ ಟೆನಿಸ್‌ನ ಮಾಜಿ ಸೂಪರ್ ಸ್ಟಾರ್ ಆದ ಸ್ವೀಡನ್‌ನ 32ರ ಹರೆಯದ ಬೋರ್ಗ್, 1983ರಲ್ಲಿ ತನ್ನ 27ರ ಹರೆಯದಲ್ಲೇ ಕ್ರೀಡಾಜೀವನದಲ್ಲಿ ಉತ್ತುಂಗದಲ್ಲಿರುವಾಗಲೇ ಟೆನಿಸ್‌ನಿಂದ ನಿವೃತ್ತಿ ಘೋಷಿಸಿದ್ದರು. ಅದರ ಇದಕ್ಕೆ ಮೊದಲೇ ಬೋರ್ಗ್ 1976 ರಿಂದ ಸತತ ಐದು ವರ್ಷ ವಿಂಬಲ್ಡನ್, 1974 ರಿಂದ 81 ರವರೆಗೆ ಆರು ಬಾರಿ ಫ್ರೆಂಚ್ ಓಪನ್ ಗೆದ್ದಿದ್ದರು. ಅವರ ಈ ದಾಖಲೆಯನ್ನು ಮುರಿಯುವುದು ಸದ್ಯಕ್ಕಂತೂ ಕಷ್ಟಸಾಧ್ಯ.

ಇಂದು ವಿಶ್ವ ಟೆನಿಸ್‌ನಲ್ಲಿ ಸ್ವೀಡನ್ ಅಗ್ರಗಣ್ಯ ಸ್ಥಾನ ಪಡೆಯಲು ಬೋರ್ಗ್‌ರ ಸಾಧನೆ ಪ್ರಧಾನ ಕಾರಣ. ಅದುವರೆಗೆ ಸ್ವೀಡನ್‌ನಲ್ಲಿ ಟೆನಿಸ್ ಸಾಮಾನ್ಯ ಕ್ರೀಡೆಯಾಗಿತ್ತು. ಆದರೆ ಬೋರ್ಗ್ ಟೆನಿಸ್‌ನಲ್ಲಿ ಉತ್ತುಂಗಕ್ಕೇರಿ ವಿಶ್ವದಲ್ಲಿ ಬೆಳಗಲಾರಂಭಿಸಿದ ನಂತರ ಸ್ವೀಡನ್‌ನಲ್ಲಿ ಈ ಕ್ರೀಡೆ ಜನಪ್ರಿಯವಾಗಿ ಹೆಚ್ಚು ಹೆಚ್ಚು ಯುವಕರು ಇದರಲ್ಲಿ ತಮ್ಮನ್ನು ತೊಡಗಿ

(ಹತ್ತನೆ ಪುಟಕ್ಕೆ)

ಬೋರ್ಗ್ ಜೋಡಿ

ದೇಶದ ದೊಡ್ಡ ದುರಂತ

ಪ್ರಿಯರೆ,

'ಬೇಡತಿ ಬೇಡವಾದರೆ ಕೈಗಾ ಅನಿವಾರ್ಯ' ಎಂದು ನಿಮ್ಮ 'ಬೇರೆಯೇ ಮಾತು' ಎಚ್ಚರಿಕೆ ನೀಡಿದೆ.

'ಕೈಗಾ' ದಂತಹ ಅಣುವಿದ್ಯುತ್ ಯೋಜನೆಗಳು ಬೇಡ ಎನ್ನುವವನೇ ನಾನು. ಆದರೆ, ಅದೇ ವೇಳೆ "ಬದಲಿ ಪರಿಹಾರ ಮಾರ್ಗವನ್ನು ಸೂಚಿಸುವುದೂ ನನ್ನ ಹೊಣೆಗಾರಿಕೆಯಲ್ಲವೇ ?" ಎಂಬ ಪ್ರಶ್ನೆಯೂ ನನ್ನನ್ನು ಕಾಡುತ್ತಲಿತ್ತು. ನಿಮ್ಮ ಬರಹ ಒಂದು ವಿಶಿಷ್ಟ ಎಚ್ಚರಿಕೆಯನ್ನು ನಾಡಿನ ಹಿತಾಕಾಂಕ್ಷಿಗಳಿಗೆಲ್ಲ ನೀಡಿದೆ,

ಪರಿಸರಕ್ಕೆ ಆದಷ್ಟು ಕಡಿಮೆ ಪ್ರಮಾಣದ ಹಾನಿಯಾಗುವ ಎಚ್ಚರಿಕೆ ವಹಿಸಿ, ಸಾಧ್ಯವಾದಷ್ಟು ಸಣ್ಣ ಪುಟ್ಟ(ವಿಕೇಂದ್ರಿತ) ಯೋಜನೆಗಳ ಮೂಲಕ ನಾಡಿನಾದ್ಯಂತ ಲಭಿಸುವ ಜಲ ಸಂಪನ್ಮೂಲಗಳಿಂದ ವಿದ್ಯುದುತ್ಪಾದನಾ ಜಾಲವನ್ನೇ ನಿರ್ಮಿಸುವುದು ಒಳಿತೆಂದು ತೋರುತ್ತದೆ. ಉತ್ಪಾದನೆಯ ವಿಕೇಂದ್ರೀಕರಣದಿಂದ ಸಾಗಾಟದಲ್ಲಿನ ಸೋರಿಕೆ ಕಡಿಮೆಯಾಗದೇ ? ಮಿನಿ ವಿದ್ಯುದಾಗಾರಗಳಿಂದ ಪರಿಸರಕ್ಕಾಗುವ ಹಾನಿಯ ಪ್ರಮಾಣವು ಕಡಿಮೆಯಾಗದೇ ? ಅರಣ್ಯ ಬೆಳೆಸುವುದೂ, ರಕ್ಷಿಸುವುದೂ ಜತೆಯಲ್ಲೇ ಆಗಬೇಕು. 'ಕೈಗಾ'ದಂತಹ ಅಣು ವಿದ್ಯುತ್ ಸ್ಥಾವರಗಳಿಗಿಂತ ಜಲ ವಿದ್ಯುತ್ ಯೋಜನೆಗಳು ಎಷ್ಟೋ ವಾಸಿ. ಆದರೆ ಸ್ವಹಿತಾಸಕ್ತಿಯ ಸಲುವಾಗಿ ಬೃಹತ್ ಯೋಜನೆ ಮಾಡುವುದು ಅಪಾಯಕಾರಿಯಲ್ಲವೇ ? ಆದರೂ, ಸರಕಾರಕ್ಕೆ, ಯೋಜನಾ ವರಿಷ್ಠರಿಗೆ ಸಣ್ಣ ಯೋಜನೆಗಳಲ್ಲಿ ತೀರಾ ಅನಾಸಕ್ತಿ ಇದೆ. ಇದು ಖೇದದ ವಿಚಾರ.

ಪ್ರಜಾಪ್ರಭುತ್ವದ ಸಾಕಾರವು ನಾಡಿನಲ್ಲಿ ಮೂಡಿ ಬರುವಲ್ಲಿ ಪ್ರಜೆಗಳು ಬಳಕೆದಾರರ ಅನವರತ ಎಚ್ಚರ,ಕಾಳಜಿ ಹಾಗೂ ತೊಡಗಿಸಿಕೊಳ್ಳುವಿಕೆ ಅತ್ಯಗತ್ಯ. ಸರಕಾರವು ಯೋಜನೆಗಳನ್ನು ಹೂಡುವಂತೆಯೇ ಸಮಾನಾಂತರವಾಗಿ ಪ್ರಜಾ ಸಮೂಹದ ವೇದಿಕೆಗಳು, ಬಳಕೆದಾರರ ಸಂಘಟನೆಗಳು ದೇಶದ ಸಮಗ್ರ ಹಿತಾಸಕ್ತಿಯಿಂದ ಯೋಜನೆಗಳ ಕುರಿತು ಆಳ ಅಧ್ಯಯನ, ಚಿಂತನೆ ನಡೆಸುವುದು ಅಗತ್ಯ. ಮುಂದಿನ 15–25 ವರ್ಷಗಳ ತನಕದ ಅವಧಿಗೆ ಸರಕಾರವೂ, ಪ್ರಜಾ-ಬಳಕೆದಾರರ ಸಂಘಟನೆಗಳೂ ಬೇರೆ ಬೇರೆಯಾಗಿ ಯೋಜನೆಗಳನ್ನು ರೂಪಿಸಿ ಪರಿಶೀಲಿಸುತ್ತಿರಬೇಕು. ಆದರೆ ದುಃಖದ ಮಾತೆಂದರೆ ಬೇಗನಾದರೆ ಅಧಿಕಾರದ ಗದ್ದುಗೆಯಲ್ಲಿರುವುದಾಗಿ ಭಾವಿಸುತ್ತಿರುವ ಎಲ್ಲ ವಿಪಕ್ಷಗಳಿಗೂ, ಅವುಗಳ ನೇತಾರರಿಗೂ ಈ ಕುರಿತಾದ ಯಾವುದೇ ಯೋಚನೆ, ನೀತಿ ಯೋಜನೆಗಳು ಇಲ್ಲದಿರುವುದು. ಇದೇ ದೇಶದ ದೊಡ್ಡ ದುರಂತ.

—ಲಕ್ಷ್ಮಣ ವ.ಭಂಡಾರ್‌ಕಾರ್

ಅವ್ವಾಡಿ, ಬಾಟ್ವಾಳ

ಪ್ರತ್ಯಕ್ಷ ಸಾಕ್ಷಿ

ಪ್ರಿಯರೆ,

'ಎಚ್ಚರಿಕೆ ! ಮಹಾಭಾರತಕ್ಕೆ ಕಥೆ ಬರೆಯಬೇಡ'- 12-2-89 ರ ಲೇಖನ ಓದಿದೆ.

ಕೋಮುವಾರು ಭಾವನೆಗಳು ನಮ್ಮ ಜಾತ್ಯಾತೀತ ಭಾರತ ರಾಷ್ಟ್ರದಲ್ಲಿ ಅದೆಷ್ಟು ಅಧೋಗತಿಗಿಳಿದಿದೆ ಎಂಬುದಕ್ಕೆ ಸ್ಪಷ್ಟ ನಿದರ್ಶನವೆಂಬಂತೆ 'ರಾಹೀ ಮಾಸೂಮ್ ರಜಾ' ಅವರಿಗೆ ಬಂದ ಪತ್ರವೇ ಪ್ರತ್ಯಕ್ಷ ಸಾಕ್ಷಿ. ಇದು ಹೀಗೆಯೇ ಮುಂದುವರಿದಲ್ಲಿ ಪುನಃ ನಮ್ಮ ದೇಶವನ್ನು ವಿಂಗಡಿಸಬಹುದಾದ ಅನಿವಾರ್ಯತೆ ಬಹಳ ದೂರವಿಲ್ಲವೇನೋ ?

—ಸಾದುದ್ದೀನ್

ಮುಂಬಯಿ

ಟಿ. ವಿ. ಮಹಾಭಾರತ ಮತ್ತು ಡಾ। ರಾಹಿ

ಪ್ರಿಯರೆ,

12-2-89 'ವಾರದ ಮುಂಗಾರು' ವಿನಲ್ಲಿ ಪ್ರಕಟವಾಗಿರುವ 'ಎಚ್ಚರಿಕೆ ಮಹಾಭಾರತಕ್ಕೆ ಕಥೆ ಬರೆಯಬೇಡ' ಎಂಬ ವಿಶೇಷ ಲೇಖನವನ್ನು ಓದಿ ಮನಸ್ಸಿಗೆ ತುಂಬಾ ಬೇಸರವಾಯಿತು.

ಕ್ರಿಶ್ಚನ್ನರಿಗೆ ಬೈಬಲ್, ಮುಸ್ಲಿಮರಿಗೆ ಕುರಾನ್ ಇದ್ದಂತೆ ಹಿಂದೂಗಳಿಗೆ ಮಹಾಭಾರತ ಪವಿತ್ರಗ್ರಂಥ. ಇಂತಹ ಪವಿತ್ರ ಗ್ರಂಥ (ಮಹಾಭಾರತ) ಟಿ ವಿ. ಸೀರಿಯಲ್‌ಗೆ ಮುಸ್ಲಿಂ ಜನಾಂಗದಲ್ಲಿ ಹುಟ್ಟಿದ ಡಾ। ರಾಹಿಮಾಸೂಮ್ ರಜಾರವರು ಕಥೆ, ಸಂಭಾಷಣೆ ಬರೆಯುತ್ತಿರುವುದು ಒಂದು ಸಂತೋಷದ ವಿಷಯ. ಈ ದೇಶದ ಹಿಂದೂ ಮುಸ್ಲಿಮರ ನಡುವೆ ಸ್ನೇಹ ಬಾಂಧವ್ಯ ನಿರ್ಮಿಸುವಲ್ಲಿ ಸಹಕಾರಿಯಾಗುವ ಅವರ ಈ ಕಾರ್ಯವನ್ನು ನಾವೆಲ್ಲರೂ ಮೆಚ್ಚಲೇಬೇಕು, ಆದರೆ ಡಾ। ರಾಹಿರವರ ಈ ದೊಡ್ಡ ಮನೋಭಾವವನ್ನು ಅಪಾರ್ಥ ಮಾಡಿಕೊಂಡ ಕೆಲವು ಮತಾಂಧರು ಅವರಿಗೆ ಬೆದರಿಕೆ ಪತ್ರ ಬರೆದಿರುವುದು ದುಃಖಕರ ಸಂಗತಿ.

ಮುಸ್ಲಿಂ ನಾಯಕರು, ಹಿಂದೂ ಹಿತರಕ್ಷಕರು ಎನಿಸಿಕೊಂಡವರು ಈ ದೇಶದ ಅಭಿವೃದ್ಧಿ ಕಾರ್ಯದಲ್ಲಿ ಎಂತಹ ಅಪಘಾತಗಳನ್ನು ಒಡ್ಡುತ್ತಿದ್ದಾರೆ ಹಾಗೂ ಧರ್ಮದ ಹೆಸರಿನಲ್ಲಿ ದೇಶದ ಜನರ ಏಕತೆಯನ್ನು ಒಡೆಯುವಲ್ಲಿ ಯಾವ ರೀತಿ ಶ್ರಮಿಸುತ್ತಿದ್ದಾರೆ ಎಂಬುದರ ಬಗ್ಗೆ ಡಾ। ರಾಹಿರವರು ಸಾಹಿತಿ ಕಮಲೇಶ್ವರ್‌ರವರಿಗೆ ಬರೆದಿರುವ ತಮ್ಮ ಪತ್ರದಲ್ಲಿ ಸಂಕ್ಷಿಪ್ತವಾಗಿ ತಿಳಿಸಿದ್ದಾರೆ. ಡಾ। ರಾಹಿಯವರು ರಾಷ್ಟ್ರ ಅಭಿಮಾನಕ್ಕೆ ಈ ಪತ್ರ ಒಂದು ಉತ್ತಮ ಉದಾಹರಣೆ. ಇಂತಹ ರಾಷ್ಟ್ರಪ್ರೇಮಿಯನ್ನು ಗೌರವಿಸುವುದನ್ನು ಬಿಟ್ಟು ಬೆದರಿಕೆ ಪತ್ರಗಳನ್ನು ಬರೆದು ಅವರ ಮನಃಶಾಂತಿಯನ್ನು ಹಾಳು ಮಾಡುತ್ತಿರುವುದು ನಿಜವಾಗಿಯೂ ದುರಂತ.

—ರಾಮು

ವಿಜಯಾನಂದ ನಗರ, ಬೆಂಗಳೂರು

ಸ್ವಾಗತಾರ್ಹ ವಿಚಾರ

ಪ್ರಿಯರೆ,

ನಿಮ್ಮ 'ವಾರದ ಮುಂಗಾರು' ವಾರ ವಾರವೂ ಹೊಸ ಹೊಸ ವಿಚಾರಗಳನ್ನು ಓದುಗನಿಗೆ ನೀಡುತ್ತಾ, ವಾರಪತ್ರಿಕೆಯಂತೆ ವೈಶಿಷ್ಟ್ಯಪೂರ್ಣವಾಗಿ ಪ್ರಕಟವಾಗುತ್ತಿದೆ. ಇದರ ಪ್ರತಿಯೊಂದು ಅಂಕಣವೂ ಓದುಗನ ಗಮನ ಸೆಳೆಯುತ್ತವೆ. ಇನ್ನೂ ಮುಂದೆಯೂ ಇದಕ್ಕೂ ಉತ್ತಮವಾಗಿ ಸಂಚಿಕೆಯು ಹೊರಬರಲಿ ಎಂಬುದು ನನ್ನ ಆಶಯ.

ತಾ–12-2–89 'ಬೇರೆಯೇ ಮಾತು' ಅಂಕಣದ ಲೇಖನದಲ್ಲಿ, ಕೇವಲ ಅಣು ವಿದ್ಯುತ್ ಯೋಜನೆಯನ್ನು ಟೀಕಿಸುವುದು ಮಾತ್ರವಲ್ಲದೆ, ಜಲವಿದ್ಯುಚ್ಛಕ್ತಿ ಉತ್ಪಾದನೆಯಿಂದಾಗುವ ಅನಾನುಕೂಲತೆಗಳನ್ನು ವಿವರಿಸುವ ಮೂಲಕ ವಿದ್ಯುತ್ ಉತ್ಪಾದನೆಯ ಸಮಸ್ಯೆಗೆ ಪರಿಹಾರಸೂಚಿಸಿರುವಿರಿ. ಇದು ಸ್ವಾಗತಾರ್ಹ ವಿಚಾರವೂ ಆಗಿದೆ. ನಿಮಗೆ ಮತ್ತು 'ಮುಂಗಾರು' ವಿಗೆ ಅಭಿನಂದನೆಗಳು.

—ಅನಂತ ಭಟ್

ಬೆಳ್ಮಣ್ಣು

ಸಂಶಯ

ನನ್ನ ಹೆಂಡತಿಯಲ್ಲಿ
ನಕ್ಕು ಮಾತಾಡಿದವ
ಅವಳ 'ಮಾಜಿ'
ಇರಬಹುದೇ ಎಂದು
ಗೇಟಿನೆದುರಲ್ಲಿ ನಿಂತು
ಇತ್ತಲೇ ನೋಡುವವ
ಕನ್ನ ಹಾಕಲು ಬಂದಿರಬಹುದೇ
ಎಂದು
ಸಂಜೆ ಬಸ್ಸಿಳಿದು
ಮನೆಯತ್ತ ಹೊರಟಾಗ
ಅವರಿವರು ಗುಸುಗುಸು
ಎಂದದ್ದು ನನ್ನ ಬೆನ್ನನ್ನು
ಕುರಿತೇ ಇರಬಹುದು ಎಂದು
ಆರಂಭವಾಗುತ್ತದೆ.
ಕೂತಲ್ಲಿ ನಿಂತಲ್ಲಿ ಕಾಡುತ್ತ
ಹೋದಲ್ಲಿ ಬೆನ್ನು ಹತ್ತುತ್ತದೆ.
ಪಕ್ಕದ ಮನೆಯವನು
ಬೀಡಿ ಹಚ್ಚಿದ ಬೆಂಕಿ
ನನ್ನ ಮನೆಗೆ ಬಿದ್ದರೆ
ಊಟದ ನಡುವೆ
ಬಾಗಿಲು ತಟ್ಟಿದವ
'ಟೆಲಿಗ್ರಾಮಿ' ನವನಾಗಿದ್ದರೆ
ಇಲ್ಲಿಂದ ನನಗೆ
ಯಾರಿಲ್ಲ ದೂರಿಗೆ ವರ್ಗವಾದರೆ
ಎಂದೆಲ್ಲ ದಿಗಿಲು ಹುಟ್ಟಿಸಿ
ಕಂಸ ಸ್ವಪ್ನವಾಗುತ್ತದೆ.
ಮನಸ್ಸಿನಲ್ಲಿ ನಾಟಿದ ಬೀಜ
ಮೊಳಕೆಯೊಡೆದು
ಬೆಳೆಯುತ್ತಾ...
ಬೆಳೆಯುತ್ತಾ ಹೋಗುತ್ತದೆ.

—ರಾಧಾಕೃಷ್ಣ ಕಲ್ಚಾರ್

ಹೊಸ-ಮಾಸಕ್ಕೆ...

ಕೊರೆದ ಚಳಿಯ ಬಿರಿದ ಹೂ-ಮನದಲಿ
ಗರಿಬಿಚ್ಚಿ ಹಾಸಿಸಕ್ಕವು ಹನ್ನೆರಡು ಮಾಸಗಳು.
ಕಾಲಗತಿಯ ಬೆಳದಿಂಗಳಿನಲಿ ಹೊರಳಿದಾಗ
ಕವಿಗೆ ಕಂಡವು ಒಣ-ಸ್ವಪ್ನ ತರಂಗಲೆಗಳು !

ಅಗೋ, ಅಲ್ಲಿ ಗುಲ್‌ಮೊಹರುಗಳ ತಂಪಿನಲಿ
ಕಾದು ಬಸವಳಿದ ನೂರು ಹನಿಗಣ್ಣುಗಳು !
ಕೊರಡು ಕೊನರದ ಬಂಜೆದೆಯ ಆಳದಲೂ
ಗೋಜಲಾಗಿ ಕಾಡುವ ಯಾರ ನೆನಪು ಬೇರುಗಳು ?

ಸುಡುವ ಉರಿನೆತ್ತಿಯ ಮೇ ಧಗೆಯಲಿ
ಎದೆಯೂಗ್ನಿ ತಲ್ಲಣಿಸಿ ಕೇಕೆಗಳು !
ಮುಂಗಾರು ಮಳೆಗೆ ನಸು ನಕ್ಕ ನೆಲದಂತೆ
ಜೀವಕ್ಕುಸಿರು ತುಂಬಿದ ಸಾಂತ್ವನಗಳು !

ಡೈರಿ ಪುಟದಲಿ ರಕ್ತ ಹನಿಗಳ ಛಾಯೆ
ಮತ್ತೆ ಕಣ್ಣೀರ–ಮುತ್ತು ಸಾಲುಗಳು !
ಕಳೆದಿರುಳಿನ ಸ್ವಪ್ನದಿ ಮುದ ತಂದ ಭಾವ-
ವಿಭ್ರಾಂತವಾದ ಹೋರಾಟ ಕಥೆಗಳು !

ಈಗ ಮುಗಿದಿದೆ ಶೋಕ ಅಧ್ಯಾಯಗಳು
ಬರೆದ ಕಾವ್ಯಗಳು–ಬರೆಯದ ನೋವುಗಳು
ಅಸ್ಪಷ್ಟ ಬೇರುಗಳು–ಸಹಸ್ರ ಗಾಯಗಳು
ವರ್ಷದ ಕನವರಿಕೆಗಳೇ ಬಾಳ ವ್ಯಥೆಯಾಗಿತ್ತು!

ಎದೆ ಪಂಜರದ ಗಿಳಿಮರಿ ಹಾರಿ ಹೋದಾಗ
ಯಮ ಯಾತನೆಯನು ಸಂತೈಸಿದಾತನ ನುಡಿ
'ಹುಟ್ಟಿ ಬರಲಿದೆ ಇದೋ ಹೊಸ ಕಾಲ-ಮಾಸ
ಕಾದು ನೋಡೋಣ ಸ್ವಾತಿ ಮುತ್ತಾದೀತು'!

• • • •

—ಶೋಭಾ ರಾವ್

ಅಮರ್‌ನಾಥ್ ವಿಂಡೀಸ್‌ಗೆ

(ಒಂಬತ್ತನೆ ಪುಟದಿಂದ)

ಕೊಂಡರು. ಈಗಂತೂ ವಿಶ್ವದ ಮೊದಲ ಹತ್ತು ಟೆನಿಸಿಗರಲ್ಲಿ ಐದು ಮಂದಿ ಸ್ವೀಡನ್ನವರು.

ಫೆ. 26 ರಂದು ಬೋರ್ಗ್ ಇಟೆಲಿಯ ಮಿಲನ್‌ನಲ್ಲಿ ತನಗಿಂತ ಆರು ವರ್ಷ ಹಿರಿಯಳಾದ ಇಟಲಿಯ ಪಾಪ್ ಸಿಂಗರ್ ಲೊರಿಡಾನಾ ಬರ್ಟೆಯವರನ್ನು ಮಿಲನ್ ಕ್ಯಾಥಡ್ರಲ್‌ನಲ್ಲಿ ವಿವಾಹವಾಗಬೇಕಾಗಿತ್ತು ಆದರೆ ಈ ಕ್ಯಾಥೋಲಿಕ್ ಮದುವೆಗೆ ಆಶೀರ್ವಾದ ನೀಡಲು ವಟಿಕನ್ ನಿರಾಕರಿಸಿತ್ತು. ಬೋರ್ಗ್ ಅವರ ಈ ಮೊದಲ ವಿವಾಹ ವಿಚ್ಛೇದಕ್ಕೆ ಮಾನ್ಯತೆ ನೀಡಲು ವಟಿಕನ್ ಇದಕ್ಕೆ ಮೊದಲೇ ನಿರಾಕರಿಸಿತ್ತು.

ಬರ್ಟೆಯವರಿಗೂ ಇದಕ್ಕೆ ಮೊದಲೊಂದು ಮದುವೆ ನಡೆದಿತ್ತು. ವಟಿಕನ್‌ನ ನಿರಾಕರಣೆಯಿಂದ ಈ ಜೋಡಿ ದೃತಿಗೆಟ್ಟಿತ್ತೆನ್ನಲಾಗಿದೆ.

1980 ರಲ್ಲಿ ಬೋರ್ಗ್, ರೊಮೇನಿಯದ ಟೆನಿಸ್ ಆಟಗಾರ್ತಿ ಮರಿಯಾನಾರನ್ನು ವಿವಾಹವಾಗಿದ್ದು ನಾಲ್ಕು ವರ್ಷಗಳ ನಂತರ ಆಕೆಗೆ ಟಾಟಾ ಹೇಳಿದ್ದರು. ನಂತರ ಸ್ವೀಡನ್‌ನ 17 ರ ಹರೆಯದ ಜೆ. ಬೋರ್ಲಿಂಗ್‌ರೊಂದಿಗೆ ಸ್ವಲ್ಪ ಕಾಲವಿದ್ದ ಬೋರ್ಗ್‌ಗೆ ಈಗ ಮೂರು ವರ್ಷದ ಮಗನಿದ್ದಾನೆ.

ವಿಪರೀತ ನಿದ್ದೆಗುಳಿಗೆ ಸೇವಿಸಿ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಬೋರ್ಗ್‌ರನ್ನು ಬರ್ಟೆ ಆಸ್ಪತ್ರೆಗೆ ಸೇರಿಸಿದ್ದು, ಅಲ್ಲಿ ಅವರು ಗುಣಮುಖರಾಗಿ ಮನೆಗೆ ಮರಳಿದ್ದಾರೆ. ಇದು ಆತ್ಮಹತ್ಯೆ ಪ್ರಯತ್ನ ಎನ್ನುವುದನ್ನು ಅವರು ನಿರಾಕರಿಸಿದ್ದಾರೆ.



ಚಿತ್ರ: ಪೀನಾರಾ





ಮಕ್ಕಳ ತೋಟ

ದುಷ್ಟ ರಾಣಿ

ಒಂದು ದೇಶದಲ್ಲಿ ಒಬ್ಬ ರಾಜನು ರಾಜ್ಯವನ್ನು ಆಳುತ್ತಿದ್ದನು. ಅವನಿಗೆ ಒಬ್ಬಳು ರಾಣಿ ಇದ್ದಳು. ಆ ರಾಣಿಗೆ ಒಬ್ಬ ಮಗನಿದ್ದನು. ಅವನ ಹೆಸರು ರಾಮ. ಹೀಗಿರಲು ಒಂದು ದಿನ ರಾಜನು ತನ್ನ ಮಂತ್ರಿಯೊಂದಿಗೆ ಬೇಟೆಯಾಡಲು ಕಾಡಿಗೆ ಹೋದನು. ಆ ಕಾಡಿನಲ್ಲಿ ಬೇಟೆಯಾಡಲು ಒಂದು ಪ್ರಾಣಿಯೂ ಸಿಗಲಿಲ್ಲ. ಆಗ ರಾಜನಿಗೆ ತುಂಬಾ ಬಾಯಾರಿಕೆಯಾಯಿತು. ರಾಜ ಮತ್ತು ಮಂತ್ರಿಯು ನೀರನ್ನು ಹುಡುಕಿಕೊಂಡು ಹೊರಟರು. ಅವರಿಗೆ ಒಂದು ಗುಡಿಸಲು ಕಾಣಿಸಿತು. ರಾಜನು ಗುಡಿಸಲಿನ ಬಾಗಿಲಲ್ಲಿ ನಿಂತು ನೀರು ಕೊಡಿ ಬಾಯಾರಿಕೆಯಾಗಿದೆ ಎಂದು ಕೂಗಿದನು. ಆ ಗುಡಿಸಲಿನ ಒಳಗಿನಿಂದ ಒಬ್ಬಳು ಸುಂದರವಾದ ಹುಡುಗಿ ನೀರನ್ನು ತೆಗೆದುಕೊಂಡು ಬಂದಳು. ರಾಜನು ಆ ಹುಡುಗಿಯನ್ನು ನೋಡಿ ಮೋಹಿತನಾಗಿ ಮದುವೆಯಾಗಲು ಕೇಳಿದನು. ಆಗ ಹುಡುಗಿಯು ನಾನು ಹೇಳಿದ ಕೆಲಸಗಳನ್ನು ಇಲ್ಲ ಎನ್ನದೆ ನೆರವೇರಿಸುವುದಾದರೆ ಮಾತ್ರ ನಿಮ್ಮನ್ನು ಮದುವೆಯಾಗುವೆ ಎಂದಳು. ರಾಜನು ಅದಕ್ಕೆ ಒಪ್ಪಿ ತನ್ನ ಕುದುರೆಯ ಮೇಲೆ ಕೂರಿಸಿಕೊಂಡು ತನ್ನ ರಾಜ್ಯಕ್ಕೆ ಬಂದನು. ಮರುದಿನ ಮದುವೆಯಾಗಿ ಅವಳನ್ನು ಪಟ್ಟದ ರಾಣಿಯನ್ನಾಗಿ ಮಾಡಿದನು. ಒಂದುದಿನ ಎರಡನೆ ರಾಣಿಯು ತನ್ನ ರಾಜ್ಯದಿಂದ ಮೊದಲನೆ ರಾಣಿಯನ್ನು ಓಡಿಸು ಎಂದು ರಾಜನಿಗೆ ಹೇಳಿದಳು. ರಾಜನು ಎರಡನೆಯ ರಾಣಿಯ ಮಾತನ್ನು ಕೇಳಿ ಮೊದಲನೆ ರಾಣಿ ಮತ್ತು ಮಗನನ್ನು ಓಡಿಸಿದನು. ಮೊದಲನೆ ರಾಣಿ ಮತ್ತು ಮಗನು ಬೇರೆಊರಿಗೆಹೋಗಿನೆಲೆಸಿದರು. ಹದಿನಾರು ವರ್ಷಗಳಾದ ಮೇಲೆ ಮೊದಲನೆ ರಾಣಿಯ ಮಗ ರಾಮನು ಆ ರಾಜ್ಯಕ್ಕೆ ಕೆಲಸಕ್ಕೆ ಹೋಗುತ್ತಿದ್ದನು. ರಾಮನು ರಾಣಿಯು ಹೇಳಿದ ಕೆಲಸವನ್ನುಮಾಡುತ್ತಿದ್ದನು. ಒಂದು ದಿನ ಎರಡನೆ ರಾಣಿಗೆ ರಾಮನು ಮೊದಲನೆ ರಾಣಿಯ ಮಗನೆಂದು ತಿಳಿಯಿತು. ಆಗ ಎರಡನೆಯ ರಾಣಿಯು ರಾಮನನ್ನು ಹೇಗಾದರೂ ಮಾಡಿ ಕೊಂದುಹಾಕಬೇಕೆಂದು ಯೋಚಿಸಿದಳು. ಒಂದು ದಿನ ಎರಡನೆ ರಾಣಿಯು ಏನೂ ಇಲ್ಲದಿದ್ದರೂ ಸಹ ನನಗೆ ಹೊಟ್ಟೆ ನೋವು ಪಕ್ಕದಲ್ಲಿ ಇರುವ ಕಾಡಿಗೆ ಹೋಗಿ ಚಿಯೋಗ್ ಸಿಯ ಗೆಡ್ಡೆಯನ್ನು ತೆಗೆದುಕೊಂಡು

ಬಾ ಎಂದು ರಾಮನಿಗೆ ಹೇಳಿದಳು. ಏನೂ ತಿಳಿಯದ ರಾಮನು ಕಾಡಿಗೆ ಹೋಗುತ್ತಿದ್ದಾಗ ಊರಿನವರು ವಿಚಾರ ತಿಳಿದು ಹೋಗಬೇಡ ಹುಲಿಯು ನಿನ್ನನ್ನು ಕೊಂದು ಹಾಕುತ್ತದೆ ಎಂದರು. ಅವರ ಮಾತನ್ನು ಕೇಳದೆ ರಾಮನು ಕಾಡಿಗೆ ಹೋದನು. ರಾಮನು ರಾಣಿಯು ಹೇಳಿದ ಗೆಡ್ಡೆಯನ್ನು ಹುಡುಕುತ್ತಿರುವಾಗ ಒಂದು ಹುಲಿಯು ರಾಮನಿಗೆ ಎದುರಾಗಿ ಮೈಮೇಲೆ ಎರಗಿತು. ಆಗ ರಾಮನು ಆ ಹುಲಿಯನ್ನು ಕೊಲ್ಲಬೇಕು ಎಂದು ಪಕ್ಕದಲ್ಲಿ ಬಿದ್ದಿದ್ದ ದೊಣ್ಣೆಯನ್ನು ಹಿಡಿದು ನಿಂತನು. ಹುಲಿಯು ರಾಮನ ಮೇಲೆ ಪುನಃ ಎರಗುವಾಗ ದೊಣ್ಣೆಯನ್ನು ತೆಗೆದು ಹುಲಿಯ ಹೊಟ್ಟೆಗೆ ತಿವಿದನು. ಆಗ ಹುಲಿಯು ಸತ್ತು ಹೋಯಿತು. ರಾಮನಿಗೆ ರಾಣಿಯು ಹೇಳಿದಗೆಡ್ಡೆಯು ಸಿಕ್ಕಿತು. ಗೆಡ್ಡೆಯನ್ನು ತೆಗೆದುಕೊಂಡು ಹೋಗಿ ಎರಡನೆಯ ರಾಣಿಗೆ ಒಪ್ಪಿಸಿದನು. ಇದನ್ನು ನೋಡಿದ ರಾಣಿಗೆ ಆಶ್ಚರ್ಯವಾಯಿತು. ರಾಣಿಯು ಮತ್ತೆ ಒಂದು ದಿನ ರಾಮನನ್ನು ಕೊಲ್ಲಲು ಒಂದು ಹಣ್ಣಿಗೆ ವಿಷ ಬೆರಸಿ ಹಣ್ಣನ್ನು ತೆಗೆದುಕೊಂಡು ಹೋಗಿ ರಾಮನಿಗೆ ಕೊಟ್ಟು ಇದನ್ನು ಸಂತೋಷದಿಂದ ತಿನ್ನು ಎಂದಳು ಕೊಟ್ಟಳು. ವಿಷ ಬೆರಸಿ ರಾಮನಿಗೆ ಹಣ್ಣನ್ನು ಕೊಡುವುದನ್ನು ನೋಡಿದ ಮಂತ್ರಿಯು ಬಂದು ಹಣ್ಣನ್ನು ತಿನ್ನ ಬೇಡ ಅದಕ್ಕೆ ವಿಷ ಬೆರಸಿದೆ ರಾಣಿಯು ನಿನ್ನನ್ನು ಕೊಲ್ಲಬೇಕೆಂದು ಈ ಕೆಲಸ ಮಾಡಿದ್ದಾಳೆ ಎಂದನು. ಆಗ ರಾಮನು ಆ ಹಣ್ಣನ್ನು ತೆಗೆದು ರಾಣಿಯ ಮುಖದ ಮೇಲೆ ಬಿಸಾಡಿದನು. ಈ ವಿಷಯ ರಾಜನಿಗೆ ಮುಟ್ಟಿತು. ಆಗ ರಾಜ ಎರಡನೆಯ ರಾಣಿಯನ್ನುಕರೆದುಅವಳನ್ನು ನೇಣು ಹಾಕಿ ಸಾಯಿಸಿದನು ಮತ್ತೆ ರಾಜನು ಮೊದಲನೆ ರಾಣಿ ತನ್ನ ಮಗ ರಾಮನನ್ನು ಕರೆದುಕೊಂಡು ಬಂದು ಸಂತೋಷದಿಂದ ರಾಜ್ಯಭಾರ ಮಾಡಿದರು.

— ಕೆ. ಜಿ. ಸಿದ್ಧಲಿಂಗೇಗೌಡ.



ಹೇಗಿದೆ ನಮ್ಮ ಜೋಡಿ ?

ಕಂದನ ತಣಿಸಿದ ಚಂದ್ರ

ರಾತ್ರಿಯು ಆಗಲು
ಚಂದಿರ ಬಂದನು
ನೀಡುತ ಜಗಕೆ ಬೆಳಕನ್ನು

ಮನೆಯಲಿ ಕಂದನು
ಕುಡಿಯದೆ ಹಾಲನು
ಜೋರಾಗಿ ಬಿಡದೆ ಅಳುತಿಹನು

ಲಾಲಿಯ ಹಾಡುತ
ಕಂದನ ತಣಿಸುವ
ಅಮ್ಮನ ಯತ್ನ ವಿಫಲವಾಯ್ತು

ಕೊಡಲೆ ಅಮ್ಮನು
ಉಪಾಯ ಹೂಡಿ
ಹೊರಗೆ ತಂದಳು ಕಂದನನು

ಲಾಲಿಯ ಹಾಡುತ
ತೋರಿದಳು ಕಂದನಿಗೆ
ನಗುತಿರುವ ದುಂಡನೆ ಚಂದ್ರನನು

ಚಂದ್ರನ ನೋಡಲು
ಕಂದನ ಮೊಗದಲಿ
ಸುಂದರ ನಗೆಯು ಕಾಣಿಸಿತು

ಅಮ್ಮನು ಕಂದಗೆ
ತೋರುತ ಚಂದಿರನ
ಎದೆಯ ಹಾಲನು ಉಣಿಸಿದಳು

ಹಾಲನು ಕುಡಿಯುತ
ಅಮ್ಮನ ಮಡಿಲಲಿ
ಕಂದನು ನಿದ್ದೆಯ ಮಾಡಿದನು

— ಗಣೇಶ ಪಿ. ನಾಡೋರ

ಹಣ್ಣಿನೊಡನೆ ಸರಸ

ಮಾವು

ಹಣ್ಣಲಿ ಇದಕೆ ರಾಜಾ ಎನುವರು
ಎಲ್ಲೆಡೆ ಸಿಗುವುದು ಮಾವು
ಊಟದ ನಂತರ ಸವಿದರೆ ಸುಖವು
ಅತಿ ಸವಿದರೆ ಉದರದಿ ನೋವು

ಹಲವು

ಮುಳ್ಳನು ಹೊಂದಿದ ಮೇಣವು ತುಂಬಿದ
ರುಚಿಕರ ಹಣ್ಣು ಹಲಸು
ಮೆಚ್ಚುವರೆಲ್ಲರು ಬೆಲೆ ಬಲು ಸೋವಿ
ಹೆಚ್ಚಾಗಿ ತಿಂದರೆ ಸೊಲಸು

ಸೇಬು

ಸತ್ವ ತುಂಬಿದ ಕಾಶ್ಮೀರದ ಫಲ
ಆರೋಗ್ಯದಾಯಕ ಸೇಬು
ಸಿರಿವಂತರಿಗಿದು ಕೊಳ್ಳಲು ಸಾಧ್ಯ
ನಮ್ಮದು ಖಾಲಿ ಜೇಬು

ಮೂಸುಂಬಿ

ಕೊಟ್ಟು ರಸದಲಿ ಶಕ್ತಿ ತುಂಬಿಡ
ವೈದ್ಯರು ಹೊಗಳುವ ಮೂಸುಂಬಿ
ಅಶಕ್ತರಿಗೆ ಈ ರಸ ಚೇತನ
ವೈದ್ಯರ ನುಡಿಯನು ನಂಬಿ

—ಕೆ. ಚಂ. ಕಾಮತ್,
ಕೋಟೇಶ್ವರ

ಅರಳಿದ ಗುಲಾಬಿ

ಕೆಂಪಿನ ಬಣ್ಣದ,
ಅಂದದ ಗುಲಾಬಿ.
ಅರಳಿದೆ ನನ್ನಯ,
ತೋಟದಲಿ.

ಎಷ್ಟೋ ಗಿಡಗಳ
ಹಚ್ಚಿರುವೆ ನಾನು
ಬಿಟ್ಟಿದೆ ಗಿಡಗಳು
ತರತರ ಹೂವು.

ಬಣ್ಣದ ಹೂವುಗಳು
ಕಂಪನು ಬೀರಿವೆ
ಕಣ್ಣನದಲಿ ಮಾತ್ರ
ಗುಲಾಬಿ ತುಂಬಿದೆ.

ಗುಲಾಬಿ ಎಂದರೆ
ನೆಹರುಗೆ ಪ್ರೀತಿ
ಸಿಕ್ಕಿಸಿಕೊಂಡಿದ್ದರು
ಕೋಟಿನ ಮೇಲೆ

ಇಂತಹ ಸುಂದರ
ಅಂದದ ಗುಲಾಬಿ
ಅರಳಿದೆ ನನ್ನಯ
ತೋಟದಲಿ.

—ಎಂ ಆರ್. ಮಂಜುನಾಥ

ಸುಳ್ಳು ತಂದ ಶಿಕ್ಷೆ

ಒಂದು ಊರಿನಲ್ಲಿ ಸುಬ್ಬಯ್ಯನೆಂಬ ಕುರಿ ಸಾಕುವವನಿದ್ದ. ಆತ ದಿನಾ ಕುರಿ ಮಂದೆಯನ್ನು ಹುಲ್ಲುಗಾವಲತ್ತ ಒಯ್ದು ಮೇಯಿಸುತ್ತಿದ್ದನು. ಆ ಊರಿನಲ್ಲಿ ಇವನಂತೆ ಇನ್ನೂ ಕೆಲವರು ಅಲ್ಪ-ಸ್ವಲ್ಪ ಕುರಿಗಳನ್ನು ಸಾಕುತ್ತಿದ್ದರು. ಇವರೆಲ್ಲಾ ಸುಬ್ಬಯ್ಯನ ಜತೆಯಲ್ಲೇ ಬಂದು ಒಂದೊಂದು ಸ್ಥಳದಲ್ಲಿ ಕುರಿಗಳನ್ನು ಮೇಯಿಸುತ್ತಿದ್ದರು. ಹುಲ್ಲುಗಾವಲ ಇನ್ನೊಂದು ಮಗ್ಗುಲಲ್ಲಿ ದಟ್ಟವಾದ ಕಾಡೊಂದು ಇದ್ದು ಆ ಕಾಡಿನಲ್ಲಿ ತೋಳಗಳ ಗುಂಪೇ ವಾಸವಾಗಿತ್ತು. ಇದರಿಂದ ಕುರುಬರು ಕಣ್ಣಲ್ಲಿ ಕಣ್ಣಿಟ್ಟು ನೋಡಿಕೊಳ್ಳುತ್ತಿದ್ದರು. ಆಗಾಗ ತೋಳಗಳು ಬಂದು ಕುರಿಗಳ ಮೇಲೆ ಎರಗಿ ಕಿರುಕುಳ ಕೊಡುತ್ತಿದ್ದುದರಿಂದ ಒಬ್ಬರಮೊಬ್ಬರು ಕೂಗಿ ಒಟ್ಟಾಗಿ ತೋಳಗಳನ್ನು ಬೆನ್ನಟ್ಟಿ ಕುರಿಗಳನ್ನು ರಕ್ಷಿಸುತ್ತಿದ್ದರು. ಹೀಗಿರಲು ಅದೊಂದು ದಿನ ಸುಬ್ಬಯ್ಯ "ತೋಳ.... ಅಯ್ಯೋ.... ತೋಳ,.... ಬಂತಪ್ಪಾ.... ಎಲ್ಲರೂ ಬನ್ನಿರೋ....!" ಎಂದು ಗಟ್ಟಿಯಾಗಿ ಅವರನ್ನೆಲ್ಲಾ ಕರೆದನು. ಅವರೆಲ್ಲಾ ನಿಜವೆಂದೇ ನಂಬಿ ಓಡೋಡಿ ಬರಲು ತೋಳಗಳು ಕಾಣಿಸದೆ "ಎಲ್ಲಿ?.....ಎಲ್ಲಿ? ಎಂದು ಕೇಳಲು ಆ ಕಡೆ ಓಡಿಹೋದವು!" ಎಂದು ಸುಳ್ಳು ಹೇಳಿದನು. ಆದರೆ ಅವರಿಗೆಲ್ಲಾ ತೋಳಗಳು ಬಂದ ಕುರುಹಾಗಲೀ ಕಾಣಿಸಲಿಲ್ಲ. ಅವರೆಲ್ಲಾ ಗುಸು ಗುಸು ಹೇಳುತ್ತಾ ಹೊರಟು ಹೋದರು. ಮರುದಿನ ಕೂಡಾ ಸುಬ್ಬಯ್ಯ ಅದೇರೀತಿ ಕೂಗು ಹಾಕಲು ಅವರೆಲ್ಲಾ ಓಡೋಡಿ ಬಂದರೂ ಮೊದಲಿನಂತೇ ಅವರಿಗೇನೂ ಕಾಣಿಸದೆ ಆತನನ್ನು ಶಪಿಸುತ್ತಾ ಹೊರಟು ಹೋದರು.ಮಗದೊಂದು ದಿನ ಸುಬ್ಬಯ್ಯ ಆಕಾಶ ಭೂಮಿ ಒಂದಾಗುವಂತೆ ಬೊಬ್ಬಿರಿಯುತ್ತಾ ಅವರನ್ನು ಕೂಗಲು, ಮೊದಲೆರಡು ಬಾರಿ ಸುಬ್ಬಯ್ಯ ತಮ್ಮನ್ನು ಮೋಸಗೊಳಿಸಿದ ಸಂಗತಿ ತಿಳಿದು ಅವರ್ಯಾರೂ ಆತನ ಕೂಗಿಗೆ ಓಗೊಡಲಿಲ್ಲ" ಅತ್ತ ಹೋಗಲೂ ಇಲ್ಲ ಸ್ವಲ್ಪ ಹೊತ್ತು ಕಳೆದ ಮೇಲೆ ಸುಬ್ಬಯ್ಯ ಅಳುತ್ತಾ ಅವರ ಬಳಿ ಹತ್ತಿ ಬರಲು ಗಾಬರಿಯಾಗಿ ಕೇಳಿದರು "ಏನಾಯ್ತೊ-ಸುಬ್ಬು?" "ಸರ್ವನಾಶವಾಯ್ತು" ನನ್ನ ಕುರಿಗಳನ್ನೆಲ್ಲಾ ತೋಳಗಳು ಎತ್ತಿಕೊಂಡೊಯ್ದುವು. ಇನ್ನು ನಾನು ಹೇಗೆ ಜೀವನ ಸಾಗಿಸಲಿ!

ಎಂದು ಜೋರಾಗಿ ಅತ್ತನು.

"ನಿನ್ನ ಮೊನ್ನೆ ನಮ್ಮನ್ನು ಸುಮ್ಮ ಸುಮ್ಮನೆ ಸುಳ್ಳು ಹೇಳಿ ಬರಲಿಸಿದ ಇಂದೂ ಕೂಡಾ ಹಾಗೇ ಆಗಿರಬಹುದೆಂದು ಎಣಿಸಿ ನಾವ್ಯಾರೂ ಬರಲಿಲ್ಲ-!ಎಂದು ಆ ಇತರರು ಹೇಳಿದರು.

ಸುಳ್ಳು ಹೇಳುತ್ತಿದ್ದುದಕ್ಕೆ ತಕ್ಕ ಶಾಸ್ತಿಯಾಯಿತೆಂದು ಸುಬ್ಬಯ್ಯ ಅರಿತುಕೊಂಡು ಸುಳ್ಳಿನಿಂದಾಗಿ ತಾನಿಂದು ಎಂತಹ ಸಂಕಷ್ಟಕ್ಕೆ ಸಿಲುಕಿಕೊಂಡೆ ಎಂದು ಕೊರಗಿದನು.

(ನೀತಿ—ಸುಳ್ಳಿನಿಂದ ಯಾರಿಗೂ ಸುಖವಿಲ್ಲ. ಒಂದು ಸುಳ್ಳಿನ ಸೃಷ್ಟಿ ನೂರಾರು ಸಂಕಷ್ಟಗಳಿಗೆ ದಾರಿ)

(ಹಿಂದಿಯಿಂದ)

ಕೆ. ಆನಂದ ಆಚಾರ್ಯ ಕೋಟೇಶ್ವರ

ಬೇರೆಯೇ ಮಾತು

ಮರಾಠೆ

ಅಪಾಯಕಾರಿ ಆಗುತ್ತಿರುವ ರಾಜ್ಯಪಾಲರ ಹುದ್ದೆ

ಭಾರತವು ಅಂಗೀಕರಿಸಿ ಪಾಲಿಸಿಕೊಂಡು ಬಂದಿರುವ ಜನತಾಂತ್ರಿಕ ರಾಜ್ಯವ್ಯವಸ್ಥೆಯಲ್ಲಿ ರಾಜ್ಯಪಾಲರ ಹುದ್ದೆ ತೀರಾ ನಿಖರವಾದ ನಿಯಮಗಳ ಚೌಕಟ್ಟಿನಲ್ಲಿ ಪೋಣಿಸಿದ ಒಂದು ಅಲಂಕಾರಿಕ ಹುದ್ದೆ. ಸ್ವಾಯತ್ತ ರಾಜ್ಯಗಳ ಒಕ್ಕೂಟವಾದ ಭಾರತದ ರಾಷ್ಟ್ರೀಯ ವ್ಯವಸ್ಥೆಯಲ್ಲಿ ರಾಜ್ಯಗಳ ಉನ್ನತಾಧಿಕಾರಿಗಳಾದ ರಾಜ್ಯಪಾಲರು ರಾಜ್ಯ ಮತ್ತು ರಾಷ್ಟ್ರದ ಸಂಬಂಧದಲ್ಲಿ ಅರಿವಿನ ಕೊಂಡಿಗಳಾಗಿ ಕೆಲಸಮಾಡಬೇಕೆಂಬುದು ಈ ಹುದ್ದೆಯ ನಿರ್ಮಾಣಕ್ಕೆ ಪ್ರೇರಕವಾದ ಗಣನೆ.

ರಾಜಕೀಯ ಅಥವಾ ಪ್ರಾದೇಶಿಕ ಭಿನ್ನತೆಗಳು ರಾಜ್ಯ ಹಾಗೂ ರಾಷ್ಟ್ರದ ಸಂಬಂಧವನ್ನು ಕೆಡಿಸದಂತೆ ನೋಡಿಕೊಳ್ಳುವ ಸ್ನೇಹ ಸೇತುವಾಗಿ ರಾಜ್ಯಪಾಲರ ಹುದ್ದೆ ಇರಬೇಕೆಂಬುದು ರಾಜ್ಯಾಂಗದ ನಿರ್ಮಾಪಕರು ನಿರೂಪಿಸಿದ ಉದ್ದೇಶ. ಇಂತಹ ಸ್ನೇಹದ ಸೇತುವಾಗಿ ಇರಬೇಕಾದ ರಾಜ್ಯಪಾಲರುಗಳು ಗೌರವಾನ್ವಿತರೂ, ಮೇಧಾವಿಗಳೂ ಮುತ್ಸದ್ದಿಗಳೂ ಆಗಿರಬೇಕೆಂಬ ಒಟ್ಟಭಿಪ್ರಾಯ ರಾಜ್ಯಾಂಗ ಸಭೆಯ ಚರ್ಚೆಯಲ್ಲಿ ಮೂಡಿ ಬಂದಿತ್ತು.

ರಾಜ್ಯಾಂಗ ಸಭೆಯ ಈ ಚರ್ಚೆಯಲ್ಲಿ ಪ್ರಮುಖ ಪಾತ್ರವಹಿಸಿದ್ದ ಎಚ್. ವಿ. ಕಾಮತ್ ಮತ್ತು ಸರ್ದಾರ್ ಹುಕ್ಕುಂ ಸಿಂಗ್ ಅವರು, ರಾಜ್ಯಪಾಲರ ಹುದ್ದೆಗಳಿಗೆ ಮಾಡುವ ಆಯ್ಕೆಯಲ್ಲಿ ರಾಜಕೀಯ ಗಣನೆ ಪ್ರಧಾನವಾಗಬಹುದಾದ ಅಪಾಯದ ಬಗ್ಗೆ ಎಚ್ಚರಿಕೆ ನೀಡಿದ್ದರು. ಈ ಹುದ್ದೆಯ ಔನ್ನತ್ಯವನ್ನು ಉಳಿಸಿಕೊಳ್ಳಬೇಕಾದರೆ ರಾಜ್ಯಪಾಲರ ಆಯ್ಕೆಯ ಅಧಿಕಾರವನ್ನು ಕೇಂದ್ರ ಸರಕಾರಕ್ಕೆ ನೀಡಬಾರದೆಂದೂ, ರಾಷ್ಟ್ರಪತಿಯವರ ಅಧೀನದಲ್ಲಿ ಅದಕ್ಕೆ ಪ್ರತ್ಯೇಕವಾದೊಂದು ವ್ಯವಸ್ಥೆಮಾಡಬೇಕೆಂದೂ ಅವರು ವಾದಿಸಿದ್ದರು. ಆದರೆ ಪಂಡಿತ ಜವಾಹರಲಾಲ್ ನೆಹರೂ ಹಾಗೂ ಗೋಪಾಲ ಸ್ವಾಮಿ ಅಯ್ಯಂಗಾರ್ ಈ ಅಭಿಪ್ರಾಯವನ್ನು ವಿರೋಧಿಸಿ ರಾಜ್ಯಪಾಲರುಗಳು ರಾಷ್ಟ್ರೀಯ ಸರಕಾರದ ರಾಜಕೀಯ ಪ್ರತಿನಿಧಿಗಳಾಗಿರಬೇಕಾಗಿರುವುದರಿಂದ ಅವರ ಆಯ್ಕೆಯ ಅಧಿಕಾರ ಕೇಂದ್ರ ಸರಕಾರಕ್ಕಿರಬೇಕೆಂದು ವಾದಿಸಿದ್ದರು. ಅಂತಿಮವಾಗಿ ರಾಜ್ಯಾಂಗ ಸಭೆಯಲ್ಲಿ ನೆಹರೂ ವಾದಕ್ಕೆ ಗೆಲುವಾಗಿ ರಾಜ್ಯಪಾಲರ ಹುದ್ದೆಗಳು ವಾಸ್ತವವಾಗಿ ರಾಜಕೀಯ ನೇಮಕಗಳಾದುವು.

"ಜನತಾಂತ್ರಿಕ ರಾಜ್ಯ ವ್ಯವಸ್ಥೆಯಲ್ಲಿ ಯಾವುದೇ ಕಾರ್ಯ ನಿರ್ವಹಣಾಧಿಕಾರವಿಲ್ಲದೆ, ನಿಷ್ಕ್ರಿಯವೂ-ಅಲಂಕಾರಿಕವೂ ಆಗಿರುವ ರಾಜ್ಯಪಾಲರ ಹುದ್ದೆಗಳಿಗೆ ಸಕ್ರಿಯ ರಾಜಕಾರಣಿಗಳನ್ನು ನೇಮಿಸುವುದರಿಂದ ರಾಜ ಭವನಗಳನ್ನು ಚಿಲ್ಲರೆ ರಾಜಕೀಯದ ಗಂಡಿಗಳಾಗಿ ಪರಿವರ್ತಿಸಿದಂತಾಗುವುದು. ಇದರ ಮೇಲಿಗೆ ಕೆಲಸವಿಲ್ಲದ ಈ ರಾಜ್ಯಪಾಲರುಗಳು ಉತ್ಸವ ಮೂರ್ತಿಗಳಾಗಿ ವಿಲಾಸಿ ಜೀವನದ ಪರಂಪರೆಯನ್ನು ಬೆಳೆಸಿಕೊಳ್ಳುವ ಅಪಾಯವಿದೆ. ಬಡದೇಶವಾದ ಭಾರತ ಇಂತಹ ವಿಲಾಸ ಜೀವನದ ಕೇಂದ್ರಗಳನ್ನು ಪೋಷಿಸಬಾರದು. ಈ ದೃಷ್ಟಿಯಿಂದ ರಾಜ್ಯಪಾಲರ ಹುದ್ದೆಗಳನ್ನು ರದ್ದು ಪಡಿಸಬೇಕು" ಎಂದು 1955ರಲ್ಲಿ ಡಾ॥ ರಾಮ ಮನೋಹರ ಲೋಹಿಯಾ ಹೇಳಿದ್ದರು.

ರಾಜ್ಯಪಾಲರ ಹುದ್ದೆಯ ಬಗ್ಗೆ ಚಿಂತನ ಶೀಲರು ಹಿಂದೆ ಆಡಿದ್ದ ಎಚ್ಚರಿಕೆಯ ಮಾತುಗಳು ನಿಜವಾಗುತ್ತಿರುವುದನ್ನು ನಾವೀಗ ಕಾಣುತ್ತಿದ್ದೇವೆ. ಈ ದೇಶದಲ್ಲಿ ರಾಜ್ಯಾಂಗ ಜಾರಿಗೆ ಬಂದ ವೇಳೆ ನಡೆದ ರಾಜ್ಯಪಾಲರುಗಳ ಎಲ್ಲ ನೇಮಕಗಳಲ್ಲೂ ರಾಜಕೀಯವೇ ಪ್ರಧಾನಗುಣವಾಗಿತ್ತು. ಈ ದೇಶವನ್ನಾಳಿದ ಕಾಂಗ್ರೆಸ್ ಪಕ್ಷವು ಅಧಿಕಾರ ಸ್ಥಾನಗಳಿಂದ ತಿರಸ್ಕೃತರಾದ ಅಥವಾ ವಯಸ್ಸಾಗಿ ಸಡು ಬಗ್ಗಿದ ಕಾಂಗ್ರೆಸ್ಸಿಗರ ಪುನರ್ವಸತಿಗೆ ರಾಜ್ಯಪಾಲರ ಹುದ್ದೆಗಳನ್ನು ಬಳಸಿತು. ರಾಜ್ಯಾಂಗ ಸಭೆಯ ಚರ್ಚೆಯಲ್ಲಿ ಮೂಡಿ ಬಂದಿದ್ದ ಒಟ್ಟಭಿಪ್ರಾಯದಂತೆ ಗೌರವಾನ್ವಿತರೂ, ಮೇಧಾವಿಗಳೂ, ಮುತ್ಸದ್ದಿಗಳೂ ಆದವರನ್ನು ರಾಜ್ಯಪಾಲರ ಹುದ್ದೆಗೆ ಆಯ್ಕೆ ಮಾಡಲು ಆಳುವ ಪಕ್ಷಕ್ಕೆ ಎಂದೂ ಸಾಧ್ಯವಾಗಿರಲಿಲ್ಲ. ಪರಿಣಾಮವಾಗಿ ಎಲ್ಲ ರಾಜ್ಯಗಳ ರಾಜಭವನಗಳು ನಿರುದ್ಯೋಗಿ ಕಾಂಗ್ರೆಸ್ಸಿಗರ ಮೋಜಿನ ಮನೆಗಳಾದುವು.

ಹೀಗೆ ರಾಜ್ಯಪಾಲರ ಹುದ್ದೆಗಳನ್ನಲಂಕರಿಸಿದ ಮಾಜಿ ಮುಖ್ಯ ಮಂತ್ರಿಗಳು, ಮಾಜಿ ಮಂತ್ರಿಗಳು ಹಾಗೂ ಬೇರೆಡೆ ಕೆಲಸಕ್ಕೆ ಬಾರದ ಹಲವ ಕಾಂಗ್ರೆಸ್ಸಿಗರು 1967ರ ವರೆಗೆ ರಾಜಕೀಯ ವಿವಾದದ ಧೂಳೆಬ್ಬಿಸದೆ ರಾಜ ವೈಭವದಲ್ಲಿ ದಿನ ಕಳೆದರು. ಆ ದಿನ ವರೆಗೆ ಕೇಂದ್ರ ಹಾಗೂ ಎಲ್ಲ ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷವೇ ಅಧಿಕಾರದಲ್ಲಿದ್ದುದರಿಂದ ಈ ರಾಜ್ಯಪಾಲರುಗಳು ಮತ್ತು ರಾಜ್ಯ ಸರಕಾರಗಳ ನಡುವೆ ಸಂಘರ್ಷಕ್ಕೆ ಅವಕಾಶವಿರಲಿಲ್ಲ. ಹೀಗಾಗಿ ರಾಜ್ಯಪಾಲರ ಹುದ್ದೆಗಳು ರಾಜಕೀಯ ವಿವಾದಕ್ಕೆ ಸಿಗಲಿಲ್ಲ.

ಇದಕ್ಕೆ ಮೊದಲು 1957ರಲ್ಲಿ ಕೇರಳ ರಾಜ್ಯದಲ್ಲಿ ಕಮ್ಯುನಿಸ್ಟ್ ಸರಕಾರ ಅಧಿಕಾರಕ್ಕೆ ಬಂದಾಗ ಕೇಂದ್ರ ಸರಕಾರವು ರಾಜ್ಯಪಾಲರನ್ನು ಚಿಲ್ಲರೆ ರಾಜಕೀಯಕ್ಕೆ ಬಳಸಿಕೊಂಡಿರುವುದು ಇತಿಹಾಸಕ್ಕೆ ಸೇರಿದ ಮಾತು. 1959ರಲ್ಲಿ ಇ. ಎಂ. ಎಸ್. ನಂಬೂದಿರಿಪ್ಪಾಡರ ಕಮ್ಯುನಿಸ್ಟ್ ಸರಕಾರವನ್ನು ಕೇಂದ್ರ ಸರಕಾರ ವಜಾ ಮಾಡಿದ ಘಟನೆಯಲ್ಲಿ ರಾಜ್ಯಪಾಲರು ಕೇಂದ್ರದ ರಾಜಕೀಯ ಏಜಂಟ್ ಎಂಬುದು ಸಾಬೀತಾಗಿತ್ತು. 1967ರ ಮಹಾಚುನಾವಣೆಯಲ್ಲಿ ದೇಶದ ಹಲವಾರು ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರ ಕಳೆದುಕೊಂಡಾಗಲೂ, ಕೇಂದ್ರದ ಕಾಂಗ್ರೆಸ್ ಸರಕಾರ ರಾಜ್ಯಪಾಲರುಗಳನ್ನು ತನ್ನ ಚಿಲ್ಲರೆ ರಾಜಕೀಯಕ್ಕೆ ಬಳಸಿಕೊಂಡಿತ್ತು.

ಅಂದಿನಿಂದ ತಡೆ ಇಲ್ಲದೆ ಮುಂದುವರಿದ ರಾಜ್ಯಪಾಲರ ಹುದ್ದೆಯ ಅಪಮೌಲ್ಯ ಇತ್ತೀಚಿನ ವರ್ಷಗಳಲ್ಲಿ ತೀರಾ ಹೊಲಸೆದ್ದಿರುವುದನ್ನು ಯಾರೂ ಅಲ್ಲಗಳೆಯಲಾರರು. ರಾಜ್ಯಾಂಗದ ಘನತೆಯನ್ನು ಎತ್ತಿಹಿಡಿಯಬೇಕಾದ ರಾಜ್ಯಪಾಲರುಗಳು ರಾಜ್ಯಾಂಗದ ವಿಧಿಗಳನ್ನು ವಿಕೃತಗೊಳಿಸುವ ರಾಜಕೀಯ ಏಜಂಟರುಗಳಾಗಿದ್ದಾರೆ. ಗೌರವದ ಔನ್ನತ್ಯದಲ್ಲಿರಬೇಕಾದ ರಾಜ್ಯಪಾಲರು ರಾಜಕೀಯ ಜಗಳದಲ್ಲಿ ರಟ್ಟೆ ಹಿಡಿದು ಎಳೆಸಿಕೊಳ್ಳುವ ಕೆಳಮಟ್ಟಕ್ಕೆ ಇಳಿದ ಸನ್ನಿವೇಶಗಳಿವೆ. 1982ರಲ್ಲಿ ಹರ್ಯಾಣದ ರಾಜ್ಯಪಾಲರಾಗಿದ್ದ ಗಣಪತಿ ದೇವಜಿ ತಪಾಸೆ ಎನ್ನುವ ಒಬ್ಬ ಹಳೆಯ ಕಾಂಗ್ರೆಸ್ಸಿಗ ಮುಂಚಿನ ದಿನ ದೇವಿಲಾಲ್ ಹತ್ತಿರ ಸಂಪುಟ ರಚಿಸಲು ಹೇಳಿ ಮಾರನೆ ದಿನ ಭಜನಲಾಲ್‌ರಿಗೆ ಮುಖ್ಯ ಮಂತ್ರಿಯಾಗಿ ಪ್ರಮಾಣ ವಚನ ನೀಡಿದ ಅಸಹ್ಯ ಕೆಲಸ ಮಾಡಿದ್ದರು. ಇದರಿಂದ ರೋಸಿ ಹೋದ ದೇವಿಲಾಲ್ ಮತ್ತವರ ಬೆಂಬಲಿಗರು ತಪಾಸೆಯ ರಟ್ಟೆ ಹಿಡಿದು ಎಳೆದಾಡಿದ್ದರು. ರಾಜ್ಯಾಂಗದ ಪಾವಿತ್ರ್ಯದ ಬಗ್ಗೆ ಯೋಚನೆ ಮಾಡುವವರನ್ನು ದಿಗಿಲುಗೊಳಿಸಿದ ಘಟನೆ ಇದು.

ಇದಾದ ಎರಡು ವರ್ಷಗಳ ನಂತರ ಆಂಧ್ರಪ್ರದೇಶದಲ್ಲಿ ರಾಜ್ಯಪಾಲರಾಗಿದ್ದ ರಾಮಲಾಲ್ ಎನ್ನುವ ವ್ಯಕ್ತಿ ಎನ್. ಟಿ. ರಾಮರಾವ್ ಸರಕಾರವನ್ನು ವಜಾಮಾಡಿ ಪಕ್ಷಾಂತರಿ ನಾದೆಂಡ್ಲ ಭಾಸ್ಕರ ರಾವ್ ಅವರನ್ನು ಮುಖ್ಯಮಂತ್ರಿಯಾಗಿ ಮಾಡಿದ ವಿಕೃತಿ ಅನೇಕರ ಮನಸ್ಸಿನಿಂದ ಇನ್ನೂ ಮಾಸಿ ಹೋಗಿರಲಾರದು. ಈಗಲೂ ಆಂಧ್ರ ಪ್ರದೇಶದ ರಾಜ್ಯಪಾಲೆಯಾಗಿರುವ ಕುಮುದ್‌ಬೆನ್ ಜೋಷಿ ಆಂಧ್ರ ಪ್ರದೇಶದಲ್ಲಿ ಕಾಂಗ್ರೆಸ್ ರಾಜಕೀಯ ಮಾಡುತ್ತಿದ್ದಾರೆ. ಅಲ್ಲಿನ ಸರಕಾರದ ವಿರುದ್ಧ ಸಂಚು ನಡೆಸುವುದೇ ಈ ರಾಜ್ಯಪಾಲೆಯ ನಿತ್ಯ ಕಸುಬಾಗಿದೆ.

ಆಂಧ್ರ ಪ್ರದೇಶದ ಈ ರಾಜ್ಯಪಾಲೆಯ ವಿರುದ್ಧ ಅಲ್ಲಿನ ಸರಕಾರ ಮಾಡಿದ್ದ ದುಂದುವ್ಯಯದ ಆರೋಪಗಳು ಎಲ್ಲರನ್ನೂ ಅಚ್ಚರಿಗೊಳಿಸಿವೆ. ರಾಜಭವನವನ್ನು ಶೋಕಿಜೀವನದ ಅರಮನೆಯಾಗಿ ಮಾಡಿದ ಆರೋಪ ಬಂದರೂ ಈ ರಾಜ್ಯಪಾಲೆಯ ಆತ್ಮಸಾಕ್ಷಿ ಕಲುಕಿಲ್ಲ. ಇಂದಿಗೂ ಅದೇ ವೈಭವದಲ್ಲಿ ಮೆರೆದಾಡುತ್ತಾ ರಾಜ್ಯ ಸರಕಾರಕ್ಕೆ ಸಲ್ಲದ ಕಿರುಕುಳ ಕೊಡುತ್ತಿದ್ದಾರೆ.

ಇವರೊಬ್ಬರೇ ಸಾಲದೆಂಬಂತೆ ಕೇರಳದಲ್ಲಿ ಇನ್ನೊಬ್ಬ ರಾಜ್ಯಪಾಲೆ ಹೆಡೆ ಆಡಲಾರಂಭಿಸಿದ್ದಾರೆ. ರಾಜಭವನವನ್ನು ಕಾಂಗ್ರೆಸ್ ಕಚೇರಿಯಾಗಿ ಪರಿವರ್ತಿಸಿದ ಆರೋಪ ಅವರ ಮೇಲಿದೆ. ಕೇರಳದ ಎಡರಂಗದ ಸರಕಾರಕ್ಕೆ ಕಿರುಕುಳ ಕೊಡುವುದೇ ಅವರ ಮುಖ್ಯ ಕೆಲಸವಾಗಿದೆ.

ರಾಮ ದುಲಾರಿ ಸಿನ್ಹ ಎನ್ನುವ ಈ ರಾಜ್ಯಪಾಲೆ ಮೊದಲು ರಾಜೀವ್ ಸಂಪುಟದಲ್ಲಿ ಸಚಿವೆಯಾಗಿದ್ದವರು. ತಮ್ಮ ನಾಯಕನ ಕಾಂಗ್ರೆಸ್ ಕೆಲಸವನ್ನೆಲ್ಲಾ ಮಾಡುವುದೇ ಈಗ ಅವರ 'ಪವಿತ್ರ' ಕರ್ತವ್ಯವಾಗಿದೆ. ಇಂತಹ ಚಿಲ್ಲರೆ ರಾಜಕೀಯ ಮಾಡುತ್ತಿರುವ ರಾಜ್ಯಪಾಲೆಯ ವಿರುದ್ಧ ಕೇರಳದ ವಿಧಾನ ಸಭೆ ಖಂಡನಾ ನಿರ್ಣಯ ಸ್ವೀಕರಿಸಿದರೂ ಅದರ ಪರಿಣಾಮ ಅವರ ಮೇಲಾಗಲಿಲ್ಲ. ಏನೂ ನಡೆದಿಲ್ಲವೆನ್ನುವ ರೀತಿಯಲ್ಲಿ ಈ ರಾಜ್ಯಪಾಲೆ ತಮ್ಮ ಸ್ಥಾನಕ್ಕೆ ಅಂಟಿಕೊಂಡಿದ್ದಾರೆ.

ಹೀಗೆ ಕೇಂದ್ರದ ರಾಜಕೀಯ ಏಜಂಟರುಗಳಾಗಿ ರಾಜ್ಯಪಾಲರ ಹುದ್ದೆಯ ಘನತೆ ಗೌರವವನ್ನು ಬೀದಿಗೆಳೆಯುತ್ತಿರುವ ರಾಜ್ಯಪಾಲರುಗಳು ಇನ್ನೂ ಅನೇಕರಿದ್ದಾರೆ. ಇವರು ಮಾಡುತ್ತಿರುವ ಚಿಲ್ಲರೆ ರಾಜಕೀಯದಲ್ಲಿ ಕೆಲವು ತೀರಾ ಅಸಹ್ಯವೆನ್ನಿಸಿದರೆ ಇನ್ನು ಕೆಲವು ಖೇದಕರವೆನ್ನಿಸಬಹುದು. ಒಟ್ಟಿನಲ್ಲಿ ಇವರ್ಯಾರೂ ರಾಜ್ಯಾಂಗದ ವಿಧಿಗೆ ನಿಷ್ಠರಾಗಿಲ್ಲ. ತಮಗೆ ವೈಭವದ ಜೀವನಕ್ಕೆ ಅವಕಾಶ ಕಲ್ಪಿಸಿಕೊಟ್ಟ ರಾಜಕೀಯ ಪ್ರಭುತ್ವಕ್ಕೆ ಋಣಿಗಳಾಗಿ ಕೆಲಸ ಮಾಡುತ್ತಿದ್ದಾರೆ.

ಇಂತಹ ನೇಮಕ ರಾಜಕೀಯದ ಋಣ ತೀರಿಸುವ ಕಾಯಕಕ್ಕೆ ನಿವೃತ್ತ ಸೇನಾಧಿಕಾರಿಯೂ ಹೊರತಾಗಿಲ್ಲವೆಂದ ಮೇಲೆ ರಾಜಭವನಗಳನ್ನು ಸೇರಿದ ನಿರುದ್ಯೋಗಿ ರಾಜಕಾರಣಿಗಳ ಪಾಡೇನು? ತಮ್ಮ ರಾಜಕೀಯ ಪ್ರಭುವಿನ ಅನಿಸಿಕೆಗೆ ಹೆಜ್ಜೆ ಹಾಕುವುದೇ ಅವರ ಪರಮ ಕರ್ತವ್ಯವಾಗುತ್ತದೆ. ಆರು ತಿಂಗಳ ಹಿಂದೆ ನಾಗಾಲ್ಯಾಂಡಿನಲ್ಲಿ ರಾಜ್ಯಪಾಲ ಜ॥ ಕೃಷ್ಣರಾವ್ ಕಾಂಗ್ರೆಸ್ ರಾಜಕೀಯ ಮಾಡಿದ್ದನ್ನು ಇಷ್ಟು ಬೇಗ ಮರೆಯಲು ಸಾಧ್ಯವಿಲ್ಲ.

ರಾಜ್ಯಪಾಲರಾದವರ ವೈಯಕ್ತಿಕ ನಡವಳಿಕೆಯ ಮೇಲೆ ಬೆಳಕು ಚೆಲ್ಲುವುದು ನನ್ನ ಉದ್ದೇಶವಲ್ಲ. ರಾಜ್ಯಪಾಲರ ಹುದ್ದೆಯಂತಹ ರಾಜ್ಯಾಂಗ ರಕ್ಷಕ ಹುದ್ದೆಗೆ ಅಪ್ಪಟ ರಾಜಕೀಯ ನೇಮಕಗಳಾದಾಗ ಆಗಬಹುದಾದ ಅನಾಹುತಗಳನ್ನು ಚರ್ಚಿಸುವುದೇ ನನ್ನ ಉದ್ದೇಶ.
ಈ ದೇಶದಲ್ಲಿಂದು ಆಗಿರುವ ರಾಜ್ಯಪಾಲರ ಹುದ್ದೆಯ ಅಪಮೌಲ್ಯಕ್ಕೆ ಪ್ರಧಾನವಾಗಿ ಕೇಂದ್ರ ಸರಕಾರ ಹೊಣೆಯಾಗುತ್ತದೆ. ಇಂತಹ ಅತಿ ಸೂಕ್ಷ್ಮವಾದ ಆಯಕಟ್ಟಿನ ಸ್ಥಾನಗಳಿಗೆ ರಾಜಕೀಯವಾಗಿ ಪರಿತ್ಯಕ್ತರಾದ 'ಹೌದಪ್ಪ'ಗಳನ್ನು ನೇಮಿಸುವ ದೊಡ್ಡ ಅಪರಾಧವನ್ನು ಕೇಂದ್ರ ಸರಕಾರ ಎಸಗುತ್ತಲೇ ಬಂದಿದೆ. ಇದರಿಂದ ಕೇಂದ್ರ ಸರಕಾರಕ್ಕೆ ಅಲ್ಪ ಕಾಲೀನ ರಾಜಕೀಯ ಅನುಕೂಲವಾಗಿರಬಹುದು. ಆದರೆ ಇದರಿಂದ ರಾಜ್ಯಗಳು ಮತ್ತು ಕೇಂದ್ರ ಸರಕಾರದ ನಡುವಿನ ಸಾಂವಿಧಾನಿಕ ಸಂಬಂಧಕ್ಕೆ ಅಪಾರ ಹಾನಿಯಾಗುತ್ತಿದೆ.

ಭಾರತದ ರಾಷ್ಟ್ರೀಯ ಒಕ್ಕೂಟವು ರಾಜ್ಯಗಳೊಡನೆ ಹೊಂದಿರ ಬೇಕಾದ ಸ್ನೇಹ ಸಂಬಂಧ ಈಗ ಕಳಚಿಕೊಳ್ಳುತ್ತಿದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳ ನಡುವೆ ಅನಗತ್ಯವಾದ ಸಂಘರ್ಷಗಳು ಈಗ ಬೆಳೆಯುತ್ತಿವೆ. ಈ ಸಂಘರ್ಷಗಳಿಗೆ ರಾಜಕೀಯ ಭಿನ್ನತೆಗಳಿಗಿಂತ ಹೆಚ್ಚಿನ ಕಾರಣ ರಾಜ್ಯಪಾಲರುಗಳ ಚಿಲ್ಲರೆ ರಾಜಕೀಯವಾಗುತ್ತಿದೆ. ರಾಜ್ಯಗಳಲ್ಲಿ ತಾನು ನೆಲೆಗೊಳಿಸಿದ ರಾಜಕೀಯ ಏಜಂಟರುಗಳಾದ ರಾಜ್ಯಪಾಲರ ಮೂಲಕ ರಾಜ್ಯಗಳ ಮೇಲೆ ಹೆಚ್ಚಿನ ಹತೋಟಿ ಪಡೆಯಬಹುದೆಂದು ಕೇಂದ್ರ ಸರಕಾರ ಯೋಚಿಸಿದ್ದರೆ ಅದು ತೀರಾ ತಪ್ಪು. ಇಂದು ಎಲ್ಲೆಡೆ ನಡೆಯುತ್ತಿರುವ ರಾಜ್ಯಪಾಲರ ರಾಜಕೀಯ ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂಬಂಧದಲ್ಲಿ ಅಪನಂಬಿಕೆಯ ಬೀಜವನ್ನು ಬಿತ್ತಿದೆ. ಕ್ರಮೇಣ ಇದು ಮೊಳಕೆಯೊಡೆದು ಕೇಂದ್ರ ಮತ್ತು ರಾಜ್ಯಗಳ ಸಂಬಂಧವನ್ನು ಪೂರ್ಣವಾಗಿ ಕೆಡಿಸಿ ಹಾಕಬಹುದು.

ಈ ದೇಶದಲ್ಲಿ ಅನೇಕರು ಭ್ರಮಿಸಿರುವಂತೆ ಪ್ರಾದೇಶಿಕ ಆಶೋತ್ತರಗಳ ಮೊಳಕೆ ಕೇಂದ್ರ ಮತ್ತು ರಾಜ್ಯಗಳ ಸಂಬಂಧವನ್ನು ಕೆಡಿಸಲಾರದು. ಪ್ರಾದೇಶಿಕ ಆಕಾಂಕ್ಷೆ ಒಕ್ಕೂಟ ಭಾರತದ ಕಲ್ಪನೆಗೆ ಪೂರಕವಾಗ ಬಲ್ಲುದೇ ಹೊರತು ಮಾರಕವಾಗಲಾರದು. ಭಾರತದ ರಾಜಕೀಯ ವಿಕೃತಿಗೆ ಈಗ ಎದುರಾಗಿರುತ್ತಿರುವ ನಿಜವಾದ ಅಪಾಯವೆಂದರೆ ರಾಜ್ಯಾಂಗದ ವಿಧಿಗಳಿಗೆ ಪ್ರಾಮಾಣಿಕ ಆಚರಣೆಯ ತಿರುಳು ತುಂಬಲು ನಾವು ವಿಫಲರಾಗಿರುವುದು. ರಾಜ್ಯಪಾಲರ ಹುದ್ದೆಯ ಅಪಮೌಲ್ಯ ನಮ್ಮ ವೈಫಲ್ಯಗಳಲ್ಲಿ ಒಂದು.

ರಾಜ್ಯಾಂಗ ನಿರೂಪಿತವಾದ ಯಾವ ಉದ್ದೇಶಕ್ಕೂ ಹಿಡಿಸದಿರುವ ಈ ಹುದ್ದೆಯನ್ನು ಹಾಗೆಯೇ ರಕ್ಷಿಸಿಕೊಂಡು ಹೋಗುವುದರಲ್ಲಿ ಅರ್ಥವಿಲ್ಲ. ರಾಜ್ಯಪಾಲರ ಹುದ್ದೆ ನಮ್ಮ ಜನ ತಾಂತ್ರಿಕ ವ್ಯವಸ್ಥೆಗೆ ಭೂಷಣ ತಂದಿಲ್ಲ. ಬದಲಾಗಿ ಅದೊಂದು ಅನಗತ್ಯ ಹೊರೆಯಾಗಿ ಪರಿಣಮಿಸಿದೆ.

ರಾಜ್ಯಾಂಗ ಬದ್ಧವಾದ ನಮ್ಮ ಜನ ತಾಂತ್ರಿಕ ವ್ಯವಸ್ಥೆಯ ಮೇಲೆ ಇನ್ನೂ ಅನೇಕ ಹೊರೆಗಳಿವೆ. ಶಾಸಕಾಂಗದ ಗುಣ ಮಟ್ಟ ಕುಸಿಯುತ್ತಿರುವುದು ಇದರಲ್ಲೊಂದು. ಶಿಥಿಲವಾಗುತ್ತಿರುವ ರಾಜಕೀಯ ವ್ಯವಸ್ಥೆಯೂ ಜನತಂತ್ರಕ್ಕೆ ಹೊರೆಯಾಗುತ್ತಿದೆ. ಹೀಗೆ ಹೆಚ್ಚುತ್ತಿರುವ ಹೊರೆಯಲ್ಲಿ ಜನತಂತ್ರ ವ್ಯವಸ್ಥೆ ಪೂರ್ಣವಾಗಿ ಕುಸಿದು ಬೀಳುವ ಮೊದಲೇ ನಾವೀಗ ಎಚ್ಚರಗೊಳ್ಳಬೇಕಾಗಿದೆ. ಕೇಂದ್ರ ಮತ್ತು ರಾಜ್ಯಗಳ ಸಂಬಂಧವನ್ನು ಕೆಡಿಸುತ್ತಿರುವ ರಾಜ್ಯಪಾಲರ ಹುದ್ದೆಯನ್ನು ರದ್ದುಪಡಿಸಬೇಕು. ಇದೊಂದು ಕ್ರಮದಿಂದ ದೇಶದ ಎಲ್ಲ ವ್ಯವಹಾರಗಳೂ ಸರಿ ದಾರಿಗೆ ಬರುವವೆಂದು ನಾನು ಹೇಳುತ್ತಿಲ್ಲ. ಸದ್ಯಕ್ಕದು ಸಾಧ್ಯವೂ ಇಲ್ಲ.

ಆದರೆ ರಾಜ್ಯಪಾಲರ ಹುದ್ದೆಯ ರದ್ದತಿಯಿಂದ ಈ ದೇಶವನ್ನು ಅಂತರ್ಯುದ್ಧದ ಅಪಾಯದಿಂದ ಪಾರು ಮಾಡಲು ಸಾಧ್ಯ. ಈ ಕುಮುದ್ ಬೆನ್‌ಗಳು ರಾಮದುಲಾರಿಗಳು ಹೀಗೆಯೇ ಮುಂದುವರಿದರೆ ಅಂತರ್ಯುದ್ಧಕ್ಕೆ ಬೇರೆ ಕಾರಣ ಬೇಡ. ವಾಸ್ತವವಾಗಿ ರಾಜ್ಯಪಾಲರ ಹುದ್ದೆಗಳು ನಮ್ಮ ಜನತಾಂತ್ರಿಕ ಶರೀರದಲ್ಲಿ ಬೆಳೆದ ಹುಣ್ಣುಗಳಂತಾಗಿವೆ. ಈ ಹುಣ್ಣಿಗೆ ಶಸ್ತ್ರಚಿಕಿತ್ಸೆ ಆಗಲೇಬೇಕು.